# ಡಾ ನಂದಾ ಪಾಟೀಲ ಕಾವ್ಯ ಚರಿತೆ

**ಡಾ ವ್ಹಿ. ಸಿ. ಐರಸಂಗ**

ಡಾ. ನಂದಾ ಪಾಟೀಲ ಕಾವ್ಯ ಚರಿತೆ

ಲೇಖಕರು: ಡಾ. ವ್ಹಿ. ಸಿ. ಐರಸಂಗ
ಶ್ರೀರಾಮ ನಗರ, ಧಾರವಾಡ–೭
ಮೊಬೈಲ್: ೯೮೪೪೮೫೬೯೨೨

ಪ್ರಕಾಶಕರು

ಪ್ರಥಮ ಮುದ್ರಣ : ೨೦೧೮

ಪುಸ್ತಕದ ಅಳತೆ :

ಕಾಗದ : ಜಿಎಸ್ಎಂ ಮ್ಯಾಪ್ ಲಿಥೊ

ಪುಟಗಳು :

ಹಕ್ಕುಗಳು :

ಮಾರಾಟದ ಹಕ್ಕು :

ಪ್ರತಿಗಳು :

ಬೆಲೆ :

ಮುಖಪುಟ ವಿನ್ಯಾಸ

ಮುದ್ರಣ :

## 'ಡಾ. ನಂದಾ ಪಾಟೀಲ ಕಾವ್ಯಚರಿತೆ'ಗೆ

## ಮುನ್ನುಡಿಯಾಗಿ

ಸಂಗೀತದಾನಂದ ಹುಟ್ಟು ಪ್ರತಿಭಾ ಸ್ಫೂರ್ತಿ
ಆರ್ತಿಯಲಿ ಐರಸಂಗರ ನುಡಿಯ ಗಾಯತ್ರಿ
ವಿವಿಧ ಛಂದೋಬಂಧ ಗಂಧ ತೀಡಿದ ಹಾಗೆ.
ಬದುಕು–ರೇಖಾಚಿತ್ರ ಕಣ್ಣಮುಂದೆಯೆ ಕಟ್ಟಿ
ಗಾಜು ಚೌಕಟ್ಟಿನಲಿ ಧಾರವಾಡದ ಚಿತ್ರ
ತುಂಬಿ ತಂಬೂರಿಯಲಿ ತಂತಿ ಮೀಟಿದ ಹಾಗೆ
ನಾದಕ್ಕೆ ಒಡನುಡಿವ ವಾದ್ಯದಬ್ಬರವಿರದ
ಸುಖ–ದುಃಖ ಸಾಮರಸ್ಯದ ಭಾಷ್ಯದನುಭೂತಿ.

ವಚನ, ಕೀರ್ತನ, ಭಾವಗೀತ, ಅಭಿಜಾತಕ್ಕು
ಸೈಎನಿಸಿ, ಮೈಮನದಿ ಧ್ಯಾನದಾವಿರ್ಭಾವ,
ಜಾನಪದ ಗೀತಕೂ ಯಾತಕೂ ಮಾಧುರ್ಯ
ಜೀವ ಸ್ಪಂದಿಸಿ ರಾಗ ಹೊಮ್ಮಿರಲು ಚಿಗುರಾಗಿ
ಹೂವಾಗಿ, ಹಣ್ಣಾಗಿ, ಕಣ್ಣಾಗಿ, ಕಿವಿಯಾಗಿ
ಗುರು–ಶಿಷ್ಯಪರಂಪರೆಯೆ ಮೃದ್ಗಂಧವಾಗಿ.

- **ಚೆನ್ನವೀರ ಕಣವಿ**

ಧಾರವಾಡ

೫/೨/೨೦೧೮

೧. ಧಾರವಾಡ
೨. ಪರಪ್ಪ ಅಜ್ಜನ ಮನೆ
೩. ಸಂಗೀತ ಸಾಗರ
೪. ಐಶ್ವರ್ಯ
೫. ವಿಧಿಯಾಟ
೬. ಲಕಮನಹಳ್ಳಿ ಓಣಿ
೭. ಧರ್ಮಾರ್ಥ ಸಂಗೀತ ಪಾಠಶಾಲೆ
೮. ಬಳ್ಳಿಯ ಮುಗುಳು
೯. ಅಭಿಜಾತ ಪ್ರತಿಭೆ
೧೦. ಸಂಗೀತ ಅಭ್ಯಾಸ
೧೧.ಮಾನ್ಯ ಮಲ್ಲಿಕಾರ್ಜುನ ಪಾಟೀಲರು
೧೨.ವಚನ–ದಾಸ ಸಾಹಿತ್ಯ ಗಾಯನ
೧೩.ಜಾನಪದ
೧೪.ಸಂಗೀತ ಕಲಾ ಕಲಶ
೧೫.ನಂದಕ್ಕ ಚರಿತ
೧೬.ಗುರುಮಾತೆ
೧೭.ಸಂಗೀತಗುರುಗಳ ಅಸಂಗತ
೧೮.ಜೀವನ
೧೯.ಮುರಘಾಮಠ
೨೦. ಕನ್ನಡ ದುಂದುಭಿ
೨೧.ತೃಪ್ತಿ
೨೨.ಸಂಗೀತದ ಸುಂದರ ಪರಿಸರ
೨೩.ಛಲದಂಕ ಮಲ್ಲ
೨೪.ಕಠಿಣ ಪ್ರಸಂಗ
೨೫.ನಂದ
೨೬.ನಂದಳ ಚರಿತೆ
೨೭.ಮಕ್ಕಳ ಸಂವಾದ
೨೮.ನಂದಾಳನ್ನ ನೋಡಾಕ ತಾಯಿ ಚೆನ್ನವ್ವ ದವಾಖಾನೆಗೆ ಬಂದಾಗ
೨೯.ಅಂದಿನಾ ಶುಭಗಳಿಗೆ
೩೦. ಮುನ್ನುಡಿ
೩೧.ವೇದನೆ
೩೨.ಆಶೀರ್ವಾದ
೩೩.ಸಾಧನೆ
೩೪.ಗುರು ಪರಂಪರೆ
೩೫.ಹೈದ್ರಾಬಾದದಿ
೩೬.ಸರಸತಿಯ ವರದಾನವು
೩೭.ದೇವರ ದೇಣಿಗೆ
೩೮.ನನ್ನ ತಾಯಿ
೩೯.ನಮ್ಮಯ ಮದುವೆ
೪೦. ಲಘು ಸಂಗೀತ
೪೧.ನಂದಾ ಹಾಡಲು

೪೨. ಸ್ವರಯಾತ್ರೆ

## ೧.ಧಾರವಾಡ

ತಾಳ: ಭಜನತೇಕಾ / ಕೆಹರವಾ

ಧಾರವಾಡಪಟ್ಟಣವು ಪುರಾತನ। ಶತ ಶತಮಾನದ ಕೀರ್ತಿಯದು
ದೇವರ ಹುಬ್ಬಳ್ಳಿಯ ಶಾಸನದಲಿ। ಧಾರವಾಡ ವಿವರಣೆ ಇಹುದು
ಧಾರಾರಾವ್ ಆಳಿದ ಈ ಊರಿಗೆ! ಧಾರವಾಡವೆಂಬುವ ಹೆಸರು
ಇಲ್ಲಿಯ ಗುಡಿ ಸೋಮೇಶ್ವರ ಸನಿಹದಿ। ಶಾಲ್ಮಲ ನದಿಯುದಿಸಿದ ತವರು
ಸುಂದರ ಗಿರಿವನ ಸೃಷ್ಟಿಯ ಸೊಬಗಿನ ಧಾರವಾಡ ಚಂದದ ಊರು
ಸಾಹಿತ್ಯಿಕ ಸಾಂಸ್ಕೃತಿಕ ಕಲಾವಿದರಿಲ್ಲಿಯೆ ಖ್ಯಾತಿಯ ಗಳಿಸಿಹರು
ಮೊದಲಿನ ಕಾಲದಿ ಧಾರವಾಡವಿದು ಏಳು ನಿವೇಶನ ಸಮುದಾಯ
ಗಿರಿವನ ಕೆರೆಗಳು ಹಸುರಿನ ಹೊಲಗಳು ಎಲ್ಲೆಡೆ ಸೃಷ್ಟಿಯ ಸೌಂದರ್ಯ
ಇಲ್ಲಿವೆ ಮಾಳಾಪುರ ಸಪ್ತಾಪುರ ಸೈದಾಪುರ ಮದಿಹಾಳಗಳು
ಮಾಳಮರಡಿ ಹಾವೇರಿಪೇಟೆ ಹೊಸಯಲ್ಲಾಪೂರದ ಭಾಗಗಳು
ಚಾಲುಕ್ಯರ ಆಡಳಿತಕೆ ಸೇರಿದ ನಾಡು ಧಾರವಾಡದ ಭೂಮಿ
ವೀರ ವಿಕ್ರಮಾದಿತ್ಯನ ರಾಣಿಯು ಮಹದೇವಿಯು ಆಳಿದ ಸೀಮೆ
ಚಾಲುಕ್ಯರ ಶಿಲ್ಪಕಲಾದ್ಯೋತಕ ಸೋಮೇಶ್ವರ ದೇವಾಲಯವು
ಸೊಬಗನು ಸೂಸುವ ಸುಂದರವಾಗಿಹ ಗುಡಿ ಎದುರಿಹುದು ಜಲಾಶಯವು
ಸೋಮೇಶ್ವರವನು ದಾಟುತೆ ಮುಂದಕೆ, ನುಗ್ಗೀಕೆರೆ ಹನುಮಂತನಿಹ
ಪ್ರಕೃತಿಯ ಸೌಂದರ್ಯದ ಸಿರಿ ತುಂಬಿದ, ಕ್ಷೇತ್ರವು ನುಗ್ಗೀ ಕೆರೆಯು ಸಹ
ಕೃಷಿಯ ವಿಶ್ವವಿದ್ಯಾಲಯ ಮತ್ತೂ ಕರ್ನಾಟಕ ಕಾಲೇಜಿಹವು
ವಿದ್ಯಾವರ್ಧಕ ಸಂಘದ ಕಟ್ಟಡ। ಮುರಘಾಮಠ ಹೆಸರಾಗಿಹವು
ನೋಡಲು ಉಳಿದಿವೆ ಕೆಲಗೇರಿಯ ಕೆರೆ। ನುಚ್ಚಂಬಲಿ ಭಾವಿಗಳೀಗ
ಹಾಲಗೇರಿ ಕೆರೆ ಜಕಣೀಭಾವಿ ಗಳಾಗಿವೆ ಕಟ್ಟಡಗಳ ಜಾಗ
ಅಳಿದುಳಿದಿಹ ಕೋಟೆಯ ಬಾಗಿಲು ಇದೆ ದುರ್ಗಾದೇವಿಯ ಗುಡಿಯು ಇದೆ
ಹಳೆಯನಗರ ಸಭೆ ಕಟ್ಟಡವೂ ಇದೆ ಬಳಿಯೇ ಆಝಾದ ಉಪವನವೂ

~~*~~

## ೨.ಪರಪ್ಪನ ಅಜ್ಜನ ಮನೆ

ತಾಳ: ಕೆಹರವಾ

ಹೊಸಯಲ್ಲಾಪುರ ಭಾಗದಿ ಇರುವಾ । ಲಕಮನ ಹಳ್ಳಿಯ ಓಣಿಯಲಿ
ವಾಸಿಸುತಿರುವುದು ಒಂದು ಕುಟುಂಬವು। ಶೀಲವಂತರಾ ಹೆಸರಿನಲಿ
ಪರಪ್ಪನವರೀ ಕುಟುಂಬದಲ್ಲಿಯ । ಹಿರಿಯರು ಮಾಜೀ ಸೈನಿಕರು
ತಿಪ್ಪಮ್ಮನು ಸತಿ ಮುಗ್ದಮತಿಯು ಅತಿ। ಹಿತದಲಿ ಜೊತೆಯಲಿ ಬಾಳಿದರು
ಬಸವಣ್ಣೆಯು ಚೆನ್ನಮ್ಮನು ಇಬ್ಬರು। ತಿಪ್ಪಮ್ಮನ ಮಕ್ಕಳು ಇರಲು
ಸೈಕಲ್ ಅಂಗಡಿ ಇಟ್ಟ ಪರಪ್ಪನು । ಮನೆತನ ವ್ಯಯ ಭಾರವಹೊರಲು
ಸವದತ್ತಿಯ ತಾಲೂಕಲಿ ಇರುವಾ। ಚಿಕ್ಕುಂಬಿಯು ಎಂಬುವ ಊರು
ಅಲ್ಲಿರುವಾ ಪಾಟೀಲರ ಮನೆಯಲಿ। ಮಲ್ಲಿಕಾರ್ಜುನರು ಸಜ್ಜನರು
ಧಾರವಾಡದಾ ಶೀಲವಂತರಾ । ಪರಪ್ಪಸುತೆ ಚೆನ್ನಮ್ಮನನು
ಮದುವೆಯಾಗಿ ಶ್ರೀ ಮಲ್ಲಿಕಾರ್ಜುನರು । ನಡೆಯಿಸಿದರು ಹೊಸಬಾಳನ್ನು

**ಷಟ್ಪದಿ**

| | |
|---|---|
| ತಾಳ–ದಾದರಾ | ತಾಳ: ದಾದರಾ |
| ಧಾರವಾಡದಲಿ ಪರಪ್ಪ | ಅಟ್ಟದಲ್ಲಿ ರುದ್ರಪ್ಪನು |
| ಹೆಣ್ಣುಮಕ್ಕಳಿಬ್ಬರನ್ನು | ಕೆಳಗೆ ಮಲ್ಲಿಕಾರ್ಜುನಪ್ಪ |
| ಮದುವೆ ಮಾಡಿ ತನ್ನ ಬಳಿಗೆ ಇರಲು ಕರೆದನು | ಅತ್ತೆ ಮಾವ ಸಹಿತ ಬಾಳು ನಡೆಸುತಿದ್ದರು |
| ಅಳಿಯರಿಬ್ಬರನ್ನು ಸಹಿತ | ಚೆನ್ನಮ್ಮನ ಮಕ್ಕಳಾರು |
| ತನ್ನಜೊತೆಗೆ ಇರಲು ಹೇಳಿ | ಬಸವಣ್ಣಿಗೆ ನಾಲ್ಕು ಮಾತ್ರ |
| ಸಾವಧಾನದಿಂದ ಮನೆಯ ನಡೆಸುತಿದ್ದನು | ಎಲ್ಲರಿಂತು ಒಂದೆ ಸೂರಿನಡಿಯಲಿದ್ದರು |

**೩.ಸಂಗೀತ ಸಾಗರ** —ಝಪತಾಳ—

ಸಂಗೀತ ಸಾಗರವ ಬುದ್ಧಿ ಬಿಂದಿಗೆಯಲ್ಲಿ   ವಿದುಷಿ ನಂದಕ್ಕ ತಾ ತುಂಬಿರುವಳು
ಆಲಾಪ ಮಾಡಿದರೆ, ಅಂದವಹ ಮುಖಮುದ್ರೆ ಶ್ರೋತೃವೃಂದಕೆ ಹರುಷ ತಂದಿರುವಳು
ಶಾರದಾಂಬೆಯ ವರವು ಭರದಿ ದೊರಕಿದುದಾಗಿ ಬಾಲ್ಯದಲೆ ಪ್ರತಿಭೆಯನು ತೋರಿರುವಳು
ಚೆನ್ನಮ್ಮ ಸುತೆ ವಿನುತೆ ನಂದಾ ಸುಗಮ ಗೀತೆ ಹಾಡಿ ಚಿನ್ನದ ಪದಕ ಪಡೆದಿರುವಳು

ಮೊದಲ ಪಾಠವ ಕಲಿತ, ಧರ್ಮಾರ್ಥ ಸಂಗೀತ ಪಾಠಶಾಲೆಯ ಗುರುವು ದಂಡಾಪುರ
ಅಲ್ಲಿಂದ ಸಂಗೀತ ಸ್ವರಯಾತ್ರೆ ಗೈಯುತಲಿ ನಂದಕ್ಕ ಬೆಳೆದಿಹಳು ಬಾನೆತ್ತರ.
ವಿದ್ವತ್ ಪರೀಕ್ಷೆಯಲಿ ಪ್ರಥಮ ಸ್ಥಾನವ ಪಡೆದ ಸಂಗೀತ ಶಾರದೆಯೆ ನಂದಕ್ಕನು
ಬಿ.ಎಂ. ಪದವಿ ಪಡೆದು ಸ್ನಾತಕೋತ್ತರ ಮುಗಿಸಿ ಜೀವನದಿ ಕಂಡುಕೊಂಡಳು ಗೆಲುವನು
ಪಂಚಾಕ್ಷರೀಸ್ವಾಮಿ। ಮತ್ತಿಗಟ್ಟಿಪಿ ಯು। ಪಾಟೀಲ ಜಾನಕಿ ಅಯ್ಯರ್ಇವರೆಡೆ
ಸಂಗಮೇಶ್ವರ ಗುರವ ಬಿಂದು ಮಾಧವರಲ್ಲಿ ಕಾಲೇಜಿನಲಿ ಪಾಠ ಕಲಿತಿರುವಳು
ಗುರುಗಳಿರುವರು ವ್ಯಾಸರಾಯರು ಇನಾಮ್ದಾರ, ತೊರವಿ ವಿನಾಯಕ ಶಾರದಾ ಹಾನಗಲ್ಲ
ಪಂಡಿತ ಮುಜುಂದಾರ ರಾಜಗುರು ಮನಸೂರ ಇವರಲೂ ಶಿಕ್ಷಣವ ಪಡೆದಿರುವಳು
ಮಾಳವಾಡ ಸುವರ್ಣ ಪದಕ ರಾಜ್ಯಪ್ರಶಸ್ತಿ ಗಾನಕೋಗಿಲೆ ಬಿರುದುಗಳ ದೊರಕಿಸಿ
ಬಹುಪ್ರತಿಷ್ಠೆಯ ಪಡೆದ ನಂದಾಳ ಪ್ರತಿಭೆಯನು ಮೆಚ್ಚಿದರು ಎನ್ಕೇಯವರು ಶ್ಲಾಘಿಸಿ
ಶಾರದಾ ಗುರುಮಾತೆ ಪ್ರಗತಿ ಪಥ ತೋರಿಸುತ ಆಶೀರ್ವದಿಸಿ ಕಳುಹಿಸಿದ ಶಿಷ್ಯಳು
ರಾಜಶೇಖರರಿಂದ ಮತ್ತೆ ಹೆಚ್ಚಿನ ರಾಗ ಜ್ಞಾನ ಪಡೆದಿಹ ಅತುಲ ಸ್ವರಶ್ರೀಯಳು
ಪತಿಯೊಡನೆ ಸಹಕರಿಸಿ ಪ್ರೀತಿಯಲಿ ವ್ಯವಹರಿಸಿ   ಸಕಲ ಯತ್ನದಿ ಯಶವ ಪಡೆದಿರುವಳು
ಕರ್ನಾಟಕದಿ ಮತ್ತೆ ಭಾರತಾದ್ಯಂತವೂ   ಸಂಗೀತದಲಿ ಹೆಸರು ಗಳಿಸಿರುವಳು
ಚೆನವೀರ ಕುವೆಂಪು ಗೋಕಾಕ ಬೆಟಗೇರಿ ಕರ್ಕಿ ಕವಿ ಐರಸಂಗರ ಪದಗಳ
ಸಂಗೀತ ಸಭೆಗಳಲಿ ಇಂಪಾಗಿ ಹಾಡುತಲಿ ತಣಿಸಿದಳು ನಂದಕ್ಕ ಜನಮನಗಳ
ಮಾನ್ಯ ಬೆಲ್ಲದರವರು ನೆರವೇರಿಸಿದ ವಚನ ಗಾನ ಕಾರ್ಯಕ್ರಮದಿ ಪಾಲ್ಗೊಳ್ಳುತೆ
ಹಾಡಿರುವ ವಚನಗಳ ಧ್ವನಿಮುದ್ರೆ ಹೊರತಂದು ಮಿನುಗಿದಳು ವಚನ ಗಾಯಕಿ ಎನ್ನುತೆ
ಸತತ ಯತ್ನದಿ ಪೂರ್ಣ ಪ್ರಜ್ಞೆಯನು ಸಂಗೀತ   ಸಾಧನೆಗೆ ಮುಡುಪಿಟ್ಟ ಶ್ರೇಯಾನ್ವಿತೆ
ಏರಿದಳು ಉತ್ತುಂಗ ಕೀರ್ತಿಶಿಖರಕೆ ವಿದುಷಿ  ಸ್ಮರಣೀಯ ಸ್ವರಯಾತ್ರೆಗಳ ಗೈಯುತೆ
ಅಪ್ರತಿಮ ಪ್ರತಿಭೆಯನು ಸ್ವರದಿ ಹೊರಸೂಸುತಲಿ   ಶ್ರೋತೃ ವೃಂದವ ತಣಿಪ ಸ್ವರಶ್ರೀಯುತೆ
ಸುಶ್ರಾವ್ಯ ಸಂಗೀತ ಲೋಕವನೆ ಸೃಜಿಸಿಹಳು   ರಸಿಕರಿಗೆ ರಸದೂಟವನು ಈಯುತೆ
ಮೇಧಾವಿ ಶ್ರೀ ಮಲ್ಲಿಕಾರ್ಜುನರ ಮನದನ್ನೆ  ನಂದಾ ವಿದುಷಿ ಬಾಳ ರಥ ನಡೆಸುತೆ
ಉಚ್ಛ ಶಿಕ್ಷಣ ಸಂಸ್ಥೆ ಎರಡರಲಿ ದುಡಿದಿಹರು  ದಂಪತಿಗಳಿಬ್ಬರೂ ಸಹಕರಿಸುತೆ
ಲತೆಯು ಕುಸುಮಿಸಿದಂತೆ ಮಕ್ಕಳಿಬ್ಬರು ಜನಿಸಿ ಸೂಸಿಹರು ಸಂಗೀತ ಸೌರಭವನೆ
ಶಾಲೆಯಲಿ ಶಿಕ್ಷಣದ ಜೊತೆಗೆ ಗಾಯನ ಕಲಿತು ಗೈದಿಹರು ಪ್ರಥಮ ಶ್ರೇಣಿಯ ಸಾಧನೆ

ತಾಳ: ಝಪತಾಳ

ವಿಶ್ವವಿದ್ಯಾಲಯದಿ ಸಂಗೀತ ಶಿಕ್ಷಣದ ಪ್ರಾಧ್ಯಾಪಕಿಯ ಕಾರ್ಯ ನಿರ್ವಹಿಸುತೆ
ವಿದುಷಿ ನಂದಾ ತನ್ನ ಜಾಣ್ಮೆಯನು ತೋರಿದಳು ಶಿಷ್ಯರಿಗೆ ಸಂಗೀತವನು ಕಲಿಸುತೆ

ಭಜನ ಠೇಕಾ/ ಕೆಹರವಾ

ಡಾಕ್ಟರೇಟ ಪದವಿಯ ಪಡೆಯುವುದಕೆ ಸಂಶೋಧನೆಯಲಿ ಶಿಷ್ಯರಿಗೆ
ಫಲಪ್ರದವಾಗಿಹ ಮಾರ್ಗವ ತೋರಿದ ಗರಿಮೆಯು ಸಂದಿದೆ ನಂದಾಗೆ

ತಾಳ : ದಾದರಾ

ನಗುವ ಮೊಗದಿ ಸೊಗದ ಗೀತ ಮಧುರ ರಾಗ ಸಂಹಿತೆ
ಹಣೆಗೆ ಶುಭ್ರ ಭಸ್ಮ ಶೋಭೆ ನಂದ ಕುಂಕುಮಾಂಕಿತೆ

**೪.ಐಶ್ವರ್ಯ** (ಝಪತಾಳ)

ಐಶ್ವರ್ಯ ಬಲು ಚೆಲುವೆ ಮುದ್ದು ಮಗಳೆನ್ನೆವಳು ಚಂದನದ ಚೆಲು ಗೊಂಬೆಯಂತೆ
ಹಾಲುಗಲ್ಲದ ಬಾಲೆ ಕಿವಿಗೆ ಚಿನ್ನದ ಓಲೆ ಮಾತುಗಳು ಮುತ್ತುದುರಿದಂತೆ
ಬಹಳ ಸುಂದರ ನೋಟ ಮರೆಯಲಾಗದ ಆಟ ಐಶ್ವರ್ಯನಮಗೆಲ್ಲ ಹೆಮ್ಮೆ
ಅವಳ ಕಾಲ್ಗುಣದಿಂದ ಮನೆಮಾರು ಸಿರಿಧಾನ್ಯ ದೊರೆತಿಹವು ಎದಕಿಲ್ಲ ಕಡಿಮೆ
ಅಂತೆ ಆಕೆಯ ಹೆಸರು ಇಟ್ಟಿಹೆವು ನಮ್ಮನೆಗೆ ಅವಳ ನೆನಪಿಗೆ ಎಂದೆ ನಿಜಕು
ಬಿಸಿಲಲ್ಲಿ ನೆರಳಾಗಿ ನಿಂತಿಹಳು ಮನೆಯಾಗಿ ಐಶ್ವರ್ಯ ಈ ಬಾಳ ಬೆಳಕು

**೫.ವಿಧಿಯಾಟ**

(ತಾಳ: ದಾದರಾ)

ಶಿವ ಶೀವ, ವಿಧಿಯಾಟ ಬಲ್ಲವರಾರು ಶಿವ, ಶೀವ ವಿಧಿಯಾಟ ಬಲ್ಲವರಾರು
ಯಾರೀಗು ತಿಳಿಯಾದು ಮುಂಧ ಆಗೊದೊಂದು ವಿಧಿಯಾಟ ಬಲ್ಲವರಾರು,
ತಾಮ್ರದ ದುಡ್ಡೀದು ತಾಯಿ ಮಕ್ಕಳ ಕೆಡಿಸಿ ಮೋಜು ಮಾಡುವದಯ್ಯ ಜೋಕೆ
ದುಡ್ಡೀನಾಸೆಯ ಮಾಡಿ, ವ್ಯರ್ಥ ಜಗಳ ಹೂಡಿ ಒಡಕೊಂಡು ಹೋಗೂವುದ್ಯಾಕೆ॥ ಶಿವ ಶೀವ...
ಮಗಳ ಕೊಟ್ಟಾ ಮಾವ ತನ್ನ ಅಳಿಯನ ಜೋಡಿ ಜಗಳಾಡಿ ಮುರಕೊಂಡ ಮನಸು
ಮಾವ ಅಳಿಯರ ಜಗಳ ನೋಡಿ ನೊಂದಳು ನಂದಾ ಕಂಡಂತಾಯಿತು ಕೆಟ್ಟ ಕನಸು॥ ಶಿವ ಶೀವ...
ಮರ ಮರ ಮರಗ್ಯಾಳು ಕಷ್ಟವ ಸೋಸ್ಯಾಳು ಸೊರಗ್ಯಾಳು ಚಿಂತೀಯ ಮಾಡಿ
ಅಸ್ತಮಾ ಬ್ಯಾನೀಗಿ ತುತ್ತಾಗಿ ಬೆಂದಾಳು ಹೋಗಿತ್ತು ಮುಖವೆಲ್ಲಾ ಬಾಡಿ॥ ಶಿವ ಶೀವ...
ಪತಿರಾಯ ಕರುಣೀಸಿ ಆರೈಕಿ ಮಾಡೀದ ಗುಣಪಡಿಸಿದಾ ಪುಣ್ಯಜೀವಿ
ನಂದಕ್ಕ ಸಾವೀನ ಬಾಯಿಂದ ಪಾರಾಗಿ ಮರಳೀಮನಿಗಿ ಬಂದ ದೈವಿ॥ ಶಿವ ಶೀವ...

**೬. ಲಕಮನಹಳ್ಳಿ ಓಣಿ** ತಾಳ: ಕೆಹರವಾ

ನಮ್ಮಯ ಮನೆಯಲಿ, ಪರಪ್ಪ ಅಜ್ಜಗೆ। ಶಾಸ್ತ್ರಪುರಾಣದಿ ಬಹು ಭಕ್ತಿ
ಅಜ್ಜಿಯು ತಿಪ್ಪಮ್ಮಗೆ ಸಹ ಒಳ್ಳೆಯ । ಜನಪದ ಹಾಡಲು ಆಸಕ್ತಿ
ಲಕಮನಹಳ್ಳೀ ಓಣಿಯ ಬಹುಜನ । ಕಲೆಗಳಲ್ಲಿಯೂ ಪರಿಣಿತರು
ಪಂಡಿತ ತೊರವಿ ಲತಾ ನಾಡಿಗೇರ್ । ಸಂಗೀತ ಕಲಾವಿದರಿಹರು॥
ಚಿಲಕವಾಡ ಶ್ರೀರಾಮಚಂದ್ರರೂ। ಬಾನುಲಿ ನಾಟಕ ಬಲ್ಲಿದರು
ಮನೆ ಎದುರಲಿ ಕವಿ ಐರಸಂಗರೂ। ಕಾವ್ಯ ರಚನೆಯಲಿ ನುರಿತವರು॥
ಕಲಾವಿದರ ಈ ಪರಿಸರದಲಿ ಇರೆ। ನನಗೂ ಸಂಗೀತದಿ ಪ್ರೀತಿ॥

ಸಂಗೀತವ ಕಲಿಯುವ ಹಿರಿಯಾಸೆಯು। ಮೂಡಿತು ಮನದಲಿ ಈ ರೀತಿ।

**೭. ಧರ್ಮಾರ್ಥ ಸಂಗೀತ ಪಾಠ ಶಾಲೆ** (ಝಪತಾಳ)

ಧರ್ಮಾರ್ಥ ಸಂಗೀತ ಪಾಠಶಾಲೆಯ ಗುರುವು ಶೇಷಗಿರಿ ದಂಡಾಪುರವರೆಡೆಯಲಿ
ಪ್ರಾರಂಭಿಸಿದೆ ನಾನು। ಸಂಗೀತ ಕಲಿವುದನು ಸಣ್ಣಂದಿನಿಂದ ಎಂಟನೆ ವಯದಲಿ

ತಾಳ: ಕೆಹರವಾ

ಶರಣರ ವಚನಗಳೆಲ್ಲವು ಹಾಡಲು ಬರುವಂತಹ ಪದಗಳು ಅಲ್ಲ
ವಚನಗಳಿರುವದು ವಾಚನಕಾಗಿಯೆ ಹಾಡಲು ಲಯ ಅವುಗಳಲಿಲ್ಲ.
ಆದರು ಸಹ ಸಂಗೀತದಿ ಅವುಗಳ ಮೆರುಗನು ಹೆಚ್ಚಿಸಲೆಂದೆಣಿಸಿ
ವಚನಗಳನು ಹಾಡಿರುವರು ಹಲವರು ಕೆಲ ಹೊಂದಾಣಿಕೆ ಅಳವಡಿಸಿ
ನಂದಾವಿದುಷಿಯು ಸಹ ಬಹು ಶರಣರ ಮಾರ್ಮಿಕವಹ ವಚನಗಳನ್ನು
ಲಯದಲಿ ಜೋಡಿಸಿ ಹಾಡಿ ತಣಿಸಿಹಳು ಆಧ್ಯಾತ್ಮಿಕ ಜನ ಮನವನ್ನು

**೮. ~~ ಬಳ್ಳಿಯ ಮುಗುಳು ~~** (ತಾಳ: ಕೆಹರವಾ)

ಪಾಟೀಲರ ಮನೆ, ಸಿಂಗರಿಸಿದ ಹೊಸ, ಹಸುರಿನ ಬಳ್ಳಿಯ ಮುಗುಳು
ಅಶ್ವಿನಿ ನಮ್ಮಯ ಮಗಳು। ಅಶ್ವಿನಿ ಹೆಮ್ಮೆಯ ಮಗಳು
ಓದು ಬರಹದಲಿ ಗಾಯನ ಕಲೆಯಲಿ ಪಳಗುತ ಬೆಳೆದಿಹ ಮಗಳು
ಅಶ್ವಿನಿ ನಮ್ಮಯ ಮಗಳು। ಅಶ್ವಿನಿ ಹೆಮ್ಮೆಯ ಮಗಳು
ಬಾಲ್ಯದಲೇ ಬಲು ಜಾಣೆಯು ಆಕೆಯು ಶಾಲೆಯ ಅಭ್ಯಾಸದಲಿ
ತಾಯಿಯ ಬಳುವಳಿ ಸಂಗೀತವನೂ ಕಲಿತಳು ಜೊತೆ ಜೊತೆಯಲ್ಲಿ
ಬಿ.ಟೆಕ್. ಪದವಿಯ ಪಡೆದಳು ನಂತರ ವೆಲ್ಲೂರಿನ ಶಹರದಲಿ
ಮುಂದಿನ ಶಿಕ್ಷಣ ಸಿರಾಕ್ಯೂಸಿನಲಿ ಸೇವೆಯು ಕ್ಲಿವಲ್ಯಾಂಡಿನಲಿ
ಸೀಯಾಟಲಿನಲಿ ಸೇವೆಯಲಿದ್ದರು ಸಂಗೀತವ ಸಹ ಕಲಿತು
ತಾಯಿಯ ನೆರಳಲಿ ಗಾಯನ ಪರಿಣತೆ ಪಡೆದಳು ಸ್ವರಗಳನರಿತು
ದೂರದರ್ಶನದಿ ಬಾನುಲಿಗಳಲೂ ಸಂಗೀತದ ಸೌರಭವ
ನಾಡಿಗೆ ನೀಡುತೆ ಹೆಸರಾಗಿರುವಳು ಮೆರೆಯುತೆ ಸ್ವರ ವೈಭವವ
ವಿದ್ಯಾವರ್ಧಕ ಸಂಘದ ಉತ್ಸವ ಸಭೆಯಲಿ ಸಂಗೀತವನು
ನೀಡಿರುವಳು ಹಾಡಿರುವಳು ವಚನವ ರಂಜಿಸಿ ಜನಮನವನ್ನೂ

~~*~~

**೯. ~~ ಅಭಿಜಾತ ಪ್ರತಿಭೆ ~~** (ಝಪತಾಳ)

ಅಭಿಜಾತ ಪ್ರತಿಭೆ ಶ್ರೀ ಶಿವಕುಮಾರನು ಇವನು ನಂದಾ–ಶ್ರೀ ಮಲ್ಲಿಕಾರ್ಜುನ –ಪುತ್ರನು
ಸಂಗೀತ ಮನೆತನದಿ ಜನಿಸಿರುವ ಜಾಣ ಬಹು ವಿಖ್ಯಾತ ವಚನ ಗಾಯಕ ಶ್ರೇಷ್ಠನು
ಸಂಗೀತದಾ ಕ್ಷೇತ್ರ ವೆಂದು ಹೆಸರಾಗಿರುವ ಧಾರವಾಡದಿ ಜನಿಸಿದಾ ಯುವಕನು
ಮನಸೂರ ಮಲ್ಲಿಕಾರ್ಜುನ ಭೀಮಸೇನರಾ ಸಂಗೀತ ಪಥದಲ್ಲಿ ಪ್ರಖ್ಯಾತನು
ಅಭಿಯಂತ ವಿಜ್ಞಾನ ಶಿಕ್ಷಣವ ಪಡೆಯುತಿಹ ವಿದ್ಯಾರ್ಥಿಯೂ ಅಹುದು ಗಾಯಕ ಸಹ
ದಸರೆಯಲಿ ಮೈಸೂರು ಸಂಗೀತ ಉತ್ಸವದಿ ಸಂಗೀತ ಸಭೆ ನಡೆಸಿ ಯಶ ಪಡೆದಿಹ
ಅಕ್ಕ ಅಶ್ವಿನಿ ಜೊತೆಗೆ ದೇಹವೇ ದೇಗುಲವು ಬಸವ ಪಥ ಮುಂತಾದ ಧ್ವನಿ ಪ್ರತಿಗಳ
ಹೊರ ತಂದ ಶ್ರೇಯ ಈ ಯುವ ಕಲಾವಿದರಲ್ಲಿ ನಾಡಿನಾದ್ಯಂತ ಖ್ಯಾತಿಯು ಉಜ್ವಲ
ಮತ್ತೆ ನೇಗಿಲಯೋಗಿ ಎಂಬ ಚಲಚಿತ್ರದಲು । ನಟನಾಗಿರುವ ಪ್ರತಿಭೆ ಶಿವಕುಮಾರ
ಹಂಪೀ ವಿಜಯಪುರದ ಉತ್ಸವಗಳಲು ಸಹಿತ । ಹಾಡಿ ಹೆಸರಾದವನು ಶಿವಕುಮಾರ

~~*~~

**೧೦. ~~ ಸಂಗೀತದ ಅಭ್ಯಾಸ ~~**

ಸಂಗೀತದ ಅಭ್ಯಾಸವ ಗೈಯುತ ಗಾಯಕಿಯಾಗಲಿ ನಾ ಎಂದೇ
ನನ್ನಯ ತಂದೆಯು ಕಳುಹಿದರೆನ್ನನು ಸಂಗೀತದ ಶಾಲೆಗೆ ಅಂದೇ
ಗಾಯನ ಶಾಲೆಯ ಪಾಠದ ನಂತರ ಮನೆಯಲಿ ಬಂದಿರೆ ರಾತ್ರಿಯಲಿ
ಕಲಿತುದನೆಲ್ಲವ ಒಪ್ಪಿಸಿದಾಗಲೆ ಊಟವ ಮಾಡಲು ಅನುಮತಿಯು
ಧಾರವಾಡದಾ ಮುರುಘಾ ಮಠದಲಿ ಶ್ರಾವಣಮಾಸದ ಉತ್ಸವವು
ಇಡಿಯ ತಿಂಗಳೂ ಪ್ರವಚನ ಗಾಯನ ಸಭೆಗಳು ತಪ್ಪದೆ ನಡೆಯುವವು
ಇದೇ ಸಮಯದಲಿ ಶರಣರ ವಚನದ ಮನಮೋಹಕ ಗಾನವ ಗೈದೆ
ಗಾನವ ಕೇಳಿದ ಮಹಾಂತಪ್ಪಗುರು ಹೊಗಳಿದರೆನ್ನನು ಸಂತಸದೆ
ಪ್ರತಿವರುಷವು ಸಂಗೀತದ ಸೇವೆಯ ಗೈಯುತೆ ಗಾಯಕಿ ನೀನಾಗು
ನಿನ್ನಯ ಪ್ರತಿಭೆಯು ನಾಲ್ದೆಶೆಹೊಮ್ಮಲಿ ಅವರೆಂದುದು ನೆನಪಿದೆ ಈಗು
ತಪೋವನದಲೂ ಕುಮಾರಸ್ವಾಮಿಯು ವಾರ್ಷಿಕ ಸಭೆಗೆನ್ನನು ಕರೆದು
ಹಾಡಲು ಪ್ರೋತ್ಸಾಹಿಸಿದರು ಗಾನವ ಆಲಿಸುತ್ತಿದ್ದರು ಮೈಮರೆತು
ಶ್ರೋತೃಗಳೆಲ್ಲರು ಮೆಚ್ಚುತೆ ನನ್ನಯ ವಚನದ ಗಾಯನ ರೀತಿಯನು
ಅತ್ಯಾನಂದದಿ ಇತ್ತರು ಗೌರವ ಸಲ್ಲಿಸಿದರು ಬಹುಮಾನವನು.

**೧೧. ಮಾನ್ಯ ಮಲ್ಲಿಕಾರ್ಜುನ ಪಾಟೀಲರು** ಭಜನ ಠೇಕಾ / ಕೆಹರವಾ
೩–೩–೨/ ೪–೪

ಮಾನ್ಯ ಮಲ್ಲಿಕಾರ್ಜುನ ಪಾಟೀಲರು ನೀತಿಯ ದೇವತೆಯಾಗಿಹರು
ಬಾಳಿನ ದಾರಿಗೆ ನಂದಾ ದೀಪವೆ ಘನವ್ಯಕ್ತಿತ್ವದ ದೊರೆಯಹರು
ಒಳ್ಳೆಯ ನಿರ್ಣಯವನೆ ಕೈಗೊಳ್ಳುತೆ ಹಿಡಿದಿಹ ಕೆಲಸವ ಮುಗಿಸುವರು
ಮುಗಿಯುವವರೆಗೂ ಕೈಬಿಡದಿರುವಾ। ಛಲವುಳ್ಳಮನೋ ಬಲದವರು

**೧೨. ~~ ವಚನಗಾಯನ / ದಾಸಸಾಹಿತ್ಯಗಾಯನ ~~** **(ರೂಪಕ ತಾಳ)**

ಬಸವಪ್ರಮಥಾದಿಗಳು ಶರಣರು ಬರೆದ ವಚನಗಳನ್ನು ಹಾಡಲು
ದಾಟಿ ಕೂಡಿಸಿದವರು ಪಂಡಿತ ಮಲ್ಲಿಕಾರ್ಜುನರು
ಅವರು ಕೆಲವೇ ವಚನಗಳನೇ ಆಯ್ದು ಹಾಡಿದದಾಟಿಯನ್ನೇ
ಉಳಿದ ಗಾಯಕ ಜನರು ಸಹ ಅನುಕರಿಸಿ ಹಾಡಿಹರು
ವಚನಗಳು ನೂರಾರು ಇದ್ದರು ಬರಿಯ ಕೆಲವನೆ ಆಯ್ದುಕೊಂಡರು
ಬೇರೆ ವಚನಗಳನ್ನು ಸಹ ನಾ ಹಾಡಬೇಕೆನಿಸಿ
ನನ್ನದೇ ಆಗಿರುವ ದಾಟಿಯ ಹಚ್ಚಿ ಹಾಡಲು ಮನಸು ಮಾಡಿದೆ
ಯತ್ನದಲಿ ಯಶ ಕಂಡೆ ಹೊಸ ಹೊಸ ವಚನ ಗಾಯನದಿ
ನಾನು ಹಾಡಿದ ವಚನಗಳು ಬಹು ಮೆಚ್ಚುಗೆಯ ಗಳಿಸಿದವು ಎಲ್ಲವು
ಸಭೆಗಳಲ್ಲಿಯು ಅವುಗಳಿಗೆ ದೊರೆತಿಹುದು ಆದರವು
ಇಂತು ಜನಪ್ರಿಯ ವಚನಗಳ ಹೊಸ ಗಾನ ಧ್ವನಿ ಮುದ್ರೆಗಳ ಹೊರಡಿಸಿ
ವಚನಪ್ರಿಯರಿಗೆ ದೊರಕುವೊಲು ಗೈದಿಹುದೆ ಸಂತಸವು
ಹಾಡಿದೆನು–ಆರಂಭ ಮಾಡುವೆ ಎಂಬ ವಚನವ ಬೆಂಗಳೂರಲಿ

ಅದನು ಕೇಳಿದ ಶ್ರೀ ಹೊರಟ್ಟೀಯವರು ಬೆರಗಾಗಿ
ತಾವು ಹೊಸಯಲ್ಲಾಪುರದಲೇ ಇರುವವರು ಎಂದೆನುತ ಹರುಷದಿ
ನೀಡಿದರು ಪ್ರೋತ್ಸಾಹನೆಯ ನನಗಂದು ಬಹುವಾಗಿ

ಜಗದಗಲ ಮುಗಿಲಗಲ ಮತ್ತೂ ಕಾಯದಾ ಕತ್ತಲೆಯ ಕಳೆಯ್ಯೆ
ಎಂಬ ವಚನಂಗಳನು ಕೇಳುತೆ ಶ್ರೋತೃ ತಣಿದಿಹರು
ನನ್ನದೇ ಆದಂಥ ಧಾಟಿಯ ಹಚ್ಚಿ ಹಾಡಿದೆ ಅಂದವಾಗಿಯೆ
ನೆರೆದ ರಸಿಕರು ಮೆಚ್ಚಿ ಕರತಾಡನವ ಗೈದಿಹರು
ವಚನ ಸಾಹಿತ್ಯಕ್ಕೆ ಮಾತ್ರವೆ। ಗಾನ ಸೀಮಿತಗೊಳಿಸದೆಯೆ ನಾ
ದಾಸ ಸಾಹಿತ್ಯವನು ಸಹ ಸಂಗೀತಕಳವಡಿಸಿ
ರಾಗ ವೈವಿಧ್ಯತೆಯ ಮೆರುಗನು ನೀಡಿಹಾಡಿದೆ "ತಲ್ಲಣಿಸದಿರು"
"ಹರಿ ಭಜನೆ ಮಾಡೋ ನಿರಂತರ" ಎಂಬ ಹಾಡುಗಳ

~~ ಝಂಪ ತಾಳ ~~

"ಆಳುವುದೇತಕೊ ರಂಗ" ಎಂದು ದಾಸರು ಬರೆದ ಪದಗಳನು ಸಭೆಗಳಲಿ ಹಾಡಿರುವೆನು
ಜಾತಿ ಭೇದವ ತೊಡೆದು ನೀತಿ ಮಹತಿಯನರಿತು ಸುಶ್ರಾವ್ಯ ಸ್ವರಸರಣಿ ಜೋಡಿಸಿದೆನು.
"ಕೃಷ್ಣಾ ಎನಬಾರದೇ" ಎಂಬ ಹಾಡನ್ನು। ಜನಮೆಚ್ಚಿ ಮತ್ತೊಮ್ಮೆ ಹಾಡೆನ್ನುತಿರುವಾಗ
ಅವರ ಸಂತಸಭರಿತ ಪ್ರತಿಕ್ರಿಯೆಯ ನೋಡುತಲಿ ಹಿಡಿಸಲಾರದ ಹಿಗ್ಗು ಎನಗಾದುದು
ದಾಸ ಸಾಹಿತ್ಯವನು ಕೇಳಲೆಳಸಿದ ಸಕಲ ಸದ್ಭಕ್ತವೃಂದವದು ಎಮ್ಮ ಮನೆಯಂಗಳದಿ
ಕುಳಿತು ಶಾಂತತೆಯಿಂದ ಎಲ್ಲ ಹಾಡುಗಳನ್ನು ಪ್ರೀತಿಯಿಂದಲಿ ಕೇಳಿ ಮುದಗೊಂಡುದು

**೧೩. ~~ ಜನಪದ ~~** ತಾಳ : ರೂಪಕ

ದೇಶದೆಲ್ಲೆಡೆ ಜಾನಪದ ಸಾಹಿತ್ಯ ಮಹತಿಯು ವಿದಿತವು
ಪಲ್ಲಿಗೀತವು ಲೋಕಗೀತವು ಲೋಕವಾಙ್ಮಯ ಎಂಬುವು
ಭಾಷೆ ಭಾಷೆಯ ಜನರ ಜೀವನ ಶೈಲಿಗಳ ವೈಶಿಷ್ಟ್ಯವು
ಜಾನಪದ ಕಲೆ ಬಹುಪುರಾತನ ಕಾಲದಿಂದಲೆ ಲಭ್ಯವು
ಇದುವೆ ಗಾಯನ ನೃತ್ಯ ವಾದನ ತ್ರಿವಿಧ ರೂಪದಿ ವ್ಯಕ್ತವು
ಗಾನ ಮಾಧುರ್ಯತೆಯ ಮೂಲಕ ರಸಿಕ ಜನಮನ ಮುದಿತವು
ಅಕ್ಷರಂಗಳ ಜ್ಞಾನವಿರದಿದ್ದಾಗಲೂ ಗಾಯಕ ಜನ
ಜಾನಪದ ಸಾಹಿತ್ಯ ಗಾನದಿ ತಣಿಸಿಹರು ರಸಿಕರ ಮನ
ನಿತ್ಯ ಜನ ಜೀವನದ ರಸಮಯ ವಿಷಯ ಜನಪದವಾಗಿದೆ
ಜೀವನದ ಮೌಲಿಕ ಮಹತ್ವವು ಜಾನಪದ ಪದಗಳಲಿದೆ
ನಮ್ಮ ನಾಡಿನ ಜಾನಪದ ಜೀವಂತವಾಗಿದೆ ಗ್ರಾಮದಿ
ಅದುವೆ ಮೌಖಿಕವಾಗಿ ಸಾಗಿದೆ ತಲೆತಲಾಂತರ ಕಾಲದಿ
ವೃಂದಗಾನದಿ ಜಾನಪದ ಇನ್ನಷ್ಟು ಸೊಬಗವನು ಬೀರಿದೆ
ಕೂಡಿ ಹಾಡಲು ಅದುವೆ ರಸಕಾರಂಜಿ ಪುಟಿದೊಲು ತೋರಿದೆ

ತಾಳ: ಕೆಹರವಾ

ನಂದಾ ಹಾಡಿದ ಜನಪದ ಗೀತೆಗಳೆಲ್ಲವ ಬುಧಜನ ಕೇಳಿಹರು
ಚಂದ್ರಕಾಂತ ಬೆಲ್ಲದರಲ್ಲದೆ ಮಹದೇವ ಹೊರಟ್ಟಿ ಹೊಗಳಿಹರು

ತಾಳ: ಝಂಪತಾಳ

ಜಾನಪದ ಗೀತೆ ಇದು ತಾವರೆಯ ಗಿಡ ಹುಟ್ಟಿ ದೇವರಿಗೆ ಬೆಳಕಾದೆ ಎಂದು

ಹಾಡಿ ನಂದಾ ಇದನು ಜನಮನವ ತಣಿಸಿಹಳು. ಮೆಚ್ಚಿದರು ಕೇಳಿದವರಂದು

ಶಿವ ಶಿವಾ ಎಂದಾರ ಸಿಡಲೆಲ್ಲ ಬಯಲಾಗಿ ಕಲ್ಲು ಬಂದೆರಗಿ ಕಡೆಗಾಗಿ

ಕಲ್ಲೂ ಬಂದೆರಗೀಕಡೆಗಾಗಿ ಎಲೆ ಮನವೆ ಶಿವನೆಂಬ ಶಬದಾ ಬಿಡಬೇಡಾ

ಬಾಲಕರಿಲ್ಲಾದ ಬಾಲೀದ್ಯಾತರ ಜನಮ ಬಾಡೀಗಿ ಎತ್ತ ದುಡದಾಂಗ

ಬಾಡೀಗಿ ಎತ್ತ ದುಡಿದಾಂಗ ಬಾಳೆಲೆಯ ಹಾಸುಂಡು ಬೀಸೀ ಒಗದಾಂಗ

ಇಂತೆಲ್ಲ ಅನುಭವದ ಜನಪದದ ಹಾಡುಗಳ ಕೇಳೀ ಬೆಲ್ಲದ ಶರಣ ಶ್ರೀಮಂತರು

ನಂದಾಳ ಜಾನಪದ ಸೊಗಡನ್ನು ಕಂಡರಿತು ಬಹುವಾಗಿ ಶ್ಲಾಘಿಸಿದ ಧೀಮಂತರು

**೧೪. ಸಂಗೀತ ಕಲಾ ಕಲಶ** ತಾಳ: ಕೆಹರವಾ

ಸಂಗೀತಕಲಾ ಕಲಶವೆ ಇವಳೆದೆ ತುಂಬಿದೆ ಸ್ವರ ಸುಧೆ ನಂದಳಲಿ

ಬಲ್ಲವರೇ ಬಲ್ಲರು ಈ ವಿದುಷಿಯ ಮಹತಿಯ ಗಾಯನ ಕ್ಷೇತ್ರದಲಿ

ಸಂಗೀತ ಮಹಾವಿದ್ಯಾಲಯದಲಿ ಪದವಿಯ ಶಿಕ್ಷಣ ಮುಗಿಸಿಹಳು

ಇಪ್ಪತ್ಮೂರರ ವಯಸಿಗೆ ಚಿನ್ನದ ಪದಕಗಳನು ಸಹ ಪಡೆದಿಹಳು

ಕನ್ನಡ ಕವಿಗಳ ಹಾಡುಗಳಲ್ಲದೆ । ಶರಣರ ವಚನಗಳನು ಸಹಿತ

ಸುಮಧುರವಾಗಿಯೆ ಹಾಡಿದ ಹಿರಿಮೆಯ ಗಾಯನ ಇವಳದು ರಸಭರಿತ

ರೂಪಕ ತಾಳ

ಸ್ನಾತಕೋತ್ತರ ಪದವಿಯನು ಬಂಗಾರಪದಕದ ಜೊತೆಯಲಿ

ಪಡೆದಿಹಳು ಸಂಗೀತ ಕಲೆಯಲಿ ವಿದುಷಿ ನಂದಾ ಗೆಲುವಲಿ

ಎಡಬಿಡದೆ ಸಂಗೀತವನೆ ಜೀವನದ ಗುರಿಯಾಗಿರಿಸುತೆ

ಸಾಧಿಸಿಹಳೆತ್ತರ ಘರಾಣೆಯ ಗಾಯಕಿಯ ವಿದ್ಯಾನ್ವಿತೆ

ತಾಳ: ಕೆಹರವಾ

ಪಿತ ಪಾಟೀಲರ ಪುತ್ರಿಯು ನಂದಾ। ಹಾಡುತಲಿರೆ ಎಮಗಾನಂದಾ॥

ಸವಿಸವಿ ಮಾತಾ ಡುವ ಅರ ಗಿಳಿಯೋ

ಇನಿದನಿಯಲಿ ಹಾಡುವ ಕೋಗಿಲೆಯೋ

ದಾಸರ ಭಕುತಿಯ ಪದಗಳ ಜೊತೆ ಜೊತೆ।

ಶರಣರ ವಚನಗ ಳನುಪಮ ಸುಧೆಯೋ

**೧೫.~~ ನಂದಕ್ಕ ಚರಿತ ~~** (ಝಪತಾಳ)

ಬರೆಯಬೇಕುತ್ತಮರ । ಚರಿತೆಯನು ಸರಿಯಾಗಿ

ಕೇಳಬೇಕಾದರದಿ ಶಾಸ್ತ್ರಂಗಳ

ಹೇಳಬೇಕುಪಯುಕ್ತ ವೆನಿಪ ನೀತಿಗಳನ್ನು

ಸುಖದ ಬಾಳ್ವೆಗೆ ದಾರಿಯಾಗುವವೊಲು

ಅಂತೆ ಬರೆವೆನು ನಾನು ನಂದಕ್ಕ ಚರಿತೆಯನು

ಓದಿ ಆನಂದಿಸಲು ಬಹುಚಂದವು

ಹಾಡಿ ನಲಿಯಲು ಗೀತ ಸಂಗೀತ ಪ್ರೇಮಿಗಳು

ಸುಖಿಸಲೆನೆ ಕೇಳಿಸಹೃದವೃಂದವು

ಸ್ವರ ಸರೋವರದಲ್ಲಿ ಸ್ವಚ್ಛಂದ ವಿಹರಿಸಿದ

ಸ್ವರ ಲೋಕ ಸಾಮ್ರಾಜ್ಞಿ ನಂದಕ್ಕನು

ಪಾಟೀಲ ಮನೆತನದಿ ಜನಿಸಿದಂತಹ ಖ್ಯಾತ

ಗಾಯಕಿಯ ಸಾಧನೆಯ ವರ್ಣಿಸುವೆನು

~~*~~

### ೧೬. ಗುರುಮಾತೆ (ರೂಪಕತಾಳ)

ಶಾರದಾ ಗುರು । ಮಾತೆಯರು ಸಂಗೀತ ಶಿಕ್ಷಣವಿತ್ತರು
ತಂದೆಯವರೂ । ಪತಿಯವರು ಸಹ । ಕಲಿಯೆ ಪ್ರೋತ್ಸಾಹಿಸಿದರು
ಎನಿತು ಕಲಿತರು । ತೀರದಿಹ ಸಂಗೀತ ಸಾಗರ। ವ್ಯಾಪ್ತಿಯು
ಆದರೂ ಸಾಕಷ್ಟು ಸಾಧನೆ। ಗೈದಿಹರು ಎನ್ನಯ ಗುರು
ಅವರು ಹೇಳಿದ ರಾಗಗಳ ನಾ ಮನದ ಆಳಕೆ ಇಳಿಸಿದೆ
ಒಮ್ಮೆ ಹೇಳಿದರಾಯ್ತು ಎನಗದು । ಮರೆಯದೊಲು ಅಚ್ಚಾಗಿದೆ
ಒಂದು ಕೊರತೆಯು ಮಾತ್ರ ತೋರಿದೆ ಗುರುಗಳೆಂಥವರಿದ್ದರೂ
ಶಿಷ್ಯರೊಬ್ಬರು ಗುರುವಿಂತಲು ಮುಂದೆ ಬರುವುದ ಸಹಿಸರು

(ತಾಳ: ದಾದರಾ)

ನನ್ನ ಹರಣ ನಿನಗೆ ಶರಣ ಹಾಡು ಬೇಂದ್ರೆಯವರದೆ
ಅಂದವಾದ ರಾಗದಲ್ಲಿ ಹಾಡಿ ಜನರ ತಣಿಸಿದೆ
ಹಾಡು ಕೇಳಿ ಹರುಷಗೊಂಡು ಶ್ರೋತೃವೃಂದ ಹೊಗಳಿದೆ
ಸಭಿಕ ಸಹೃದ ಜನರಮನವು ಸೊಗದಿ ಸೂರೆಗೊಂಡಿದೆ

(ತಾಳ: ಕೆಹರವಾ)

ಟೊಂಕದ ಮ್ಯಾಲೆ ಕೈ ಇಟಗೊಂಡು ಎಂಬುವ ಜನಪದ ಗೀತೆಯನು
ಕೇಳಿದ ಜನ ಚಪ್ಪಾಳೆಯ ತಟ್ಟುವ ತೆರದಲಿ ನಾನದ ಹಾಡಿದೆನು
ಪಂಡಿತ ಮತ್ತೀಗಟ್ಟೀ ಗುರು ಶ್ರೀ। ಪಾಟೀಲರು ಸಹ ಕಲಿಸಿಹರು॥
ಜೈಪುರ ಘರಾಣೆ ಸಂಗೀತವನೇ। ಮನದಾಳಕೆ ಸಲೆ ಇಳಿಸಿಹರು॥
ಅಮರ ಗೀತೆ ಇದು ಬಾಲಕಿಯೋರ್ವಳ ಶ್ರುತಿ ಸಾಧನೆ ಸ್ವರಯಾತ್ರೆಯಲಿ
ಜ್ಞಾನಾರ್ಜನೆ ಗೈಯುತೆ ಸಾಗರದೊಲು ಬೆಳೆದಳು ನಂದ ಧರಿತ್ರಿಯಲಿ

### ೧೭. ~~ ಸಂಗೀತ ಗುರುಗಳ ಅಸಂಗತ ~~ (ತಾಳ: ಕೆಹರವಾ)

ಅವಗುಣವೊಂದಿದೆ ಗುರುಕುಲ ಪಥದಲಿ, ಶಿಷ್ಯರ ಪ್ರಗತಿಗೆ ಮುಳುವಾಗಿ
ತಿಂಗಳು ತಿಂಗಳು ಕಳೆದರು ಶಿಷ್ಯರು ಚೀಜೊಂದನು ಕಲಿವುದಕಾಗಿ
ವಿದುಷಿ ಅವೊನ್ಕರ ಗುರು ಅನ್ವರರಲಿ ತೋಡೀ ರಾಗದ ಚೀಜನ್ನು
ಕಲಿಯಲು ಕಳೆದರು ಆಗಿನ ಕಾಲದಿ ತಿಂಗಳುಮೂರರ ವೇಳೆಯನು
ಕಲಿವುದು ಮುಗಿದರು ಹೊರಗಿನ ಸಭೆಯಲಿ, ಹಾಡಲು ಗುರುಗಳ ಬಂಧನವು
ಗುರುಗಳ ಅನುಮತಿ ಇಲ್ಲದೆ ಶಿಷ್ಯರು ಹಾಡಲು ಸಿಗದಾಯಿತು ಅನುವು
ಆದರು ಸಾಹಸ ಮಾಡುತೆ ನಂದಾ ತನ್ನದೆ ಆದ ವಿಚಾರದಲಿ
ಸ್ವರ ಸಂಯೋಜನೆ ಗೈದಳು ಶರಣರ ವಚನಗಳಿಗೆ ಅತಿ ಚಂದದಲಿ
ಹಾಡಿರುವಳು ಇನಿದನಿಯಲಿ ಜಾಣೆಯು ಶರಣಶರಣೆಯರ ವಚನಗಳ
ಆಲಿಸಿ ಭಕುತರು ಸಂತಸಗೊಳುವೊಲು ಹೊರತಂದಿರುವಳು ಸೀಡಿಗಳ
ಮೆಚ್ಚಿರುವರು ಜನಮಾನ್ಯರು ಕೇಳುತೆ । ನಂದಾ ಅಶ್ವಿನಿಯರ ಹಾಡು

ಶಿವಕುಮಾರ ಸಹ ಹಾಡಿಹ ಸೀಡಿಯು । ಆಲಿಸಿ ನಲಿದಿದೆ ಕರುನಾಡು

~~*~~

**೧೮. ~~ ಜೀವನ ~~** **(ಝಪತಾಳ)**

ಏನು ದೇ।ವನೆ ನಿನ್ನ । ಜಗದಲ್ಲಿ। ಇನಿತೊಂದು॥

ತೊಂದರೆಗಳಿಗೆ ಸ್ಥಳವು । ದೊರಕಿರುವದೇ?

ಅದರ ಅನುಭವ ಮಾತ್ರ, ಈವರೆಗೆ ಎನಗಿಲ್ಲ।

ಅನ್ಯರಿಗೆ ಏಕೆ ಕಷ್ಟವ ನೀಡಿದೆ॥

ಬಾಲ್ಯದಲೆ ತಂದೆ ತಾಯಂದಿರನು ಕಳಕೊಂಡು

ಮಲ್ಲಿಕಾರ್ಜುನ ಕಷ್ಟ ಅನುಭವಿಸಿದ

ಜೀವನದಿ ಹೋರಾಟ ಅವನ ಪಾಲಿಗೆ ಇತ್ತೆ

ನಿರ್ದಯದಿ ನೀಡಿರುವೆಯ್ಯೆ ಆಪದ

ಆದರೂ ಒಂದು ನೆಮ್ಮದಿ ಇವನ ಯತ್ನದಲಿ

ಯಶವ ಕರುಣಿಸಿ ಕಾಯ್ದೆ ಕರುಣಾನಿಧೆ

ವಿದ್ಯಾರ್ಜನೆಯ ಪಥದಿ ಪ್ರಾಥಮಿಕ ಮಾಧ್ಯಮಿಕ

ಸ್ನಾತಕೋತ್ತರ ಪದವಿಗಳ ನೀಡಿದೆ

ನಂದಕ್ಕನಿಗೆ ಇವನ ಜೋಡಿ ಮಾಡಿದೆ ಇದುವೆ

ನಿನ್ನದೇ ವರದಾನ ವೆಂದೆಣಿಸುವೆ

ಉಟ್ಟು ನೀಲಿಯ ಸೀರೆ ಆಸನದಿ ಕುಳಿತಾಗ

ನಂದಕ್ಕ ತೋರಿದಳು ಬಲು ಚೆಲುವೆಯೆ

ಒಪ್ಪಿ ಹಿರಿಯರು ಅಂದು ಮದುವೆ ನಿಶ್ಚಯಸಿದರು

ಏನೊಂದು ಹರುಷ ತುಂಬಿತು ಮನೆಯಲಿ

ನಗರೇಶ್ವರನ ಗುಡಿಯ ಲಗ್ನಮಂಟಪದಲ್ಲಿ

ನೆರವೇರಿದುದು ಮದುವೆ ಸಂಭ್ರಮದಲಿ

**೧೯. ಮುರಘಾಮಠದಲಿ** ತಾಳ : ಭಜನ ಠೇಕಾ/ ಕೆಹರವಾ

ಧಾರವಾಡದಾ ಮುರಘಾಮಠದಲಿ ಶ್ರಾವಣ ಮಾಸವು ಹಿರಿಮೆಯದು

ತಿಂಗಳವಿಡಿ ನಾ ವಚನ ಗಾಯನವ ಮಾಡಿದುದೆನಗತಿ ಹೆಮ್ಮೆಯದು

ಸ್ವಾಮಿ ಮಹಾಂತಪ್ಪವರದೆ ಕೃಪೆ ಇರೆ ಮಠದಲಿ ಸೇವೆಯ ಸಲ್ಲಿಸಿದೆ

ಅಲ್ಲಿ ನೆರೆದ ಭಕ್ತಾದಿಗಳೆಲ್ಲರು ಆಲಿಸಿದರು ಬಹು ಸಂತಸದೆ

ಮಹಾಂತಪ್ಪಗಳು ಇತ್ತರು ಗೌರವ ಧನ ಹನ್ನೊಂದು ರೂಪಾಯಿಗಳ

ಅದೇ ಎನಗೆ ಘನವಾದುದು ಎನಿಸಿತು ಮರೆಯೆನು ಆ ರಸನಿಮಿಷಗಳ

ತಪೋವನದ ಆಶ್ರಮದಲಿ ಸಹ ಪ್ರತಿ ವರುಷವು ಹಾಡಿದೆ ಅನವರತ

ತತ್ವದ ಪದಗಳ ಕೇಳುತ ನಲಿದರು ಪರದೇಶಿಗ ಭಕುತರು ಸಹಿತ

ಹಾಡಿನ ನಂತರ ಬಂದೆನ್ನಯ ಬಳಿ ಅಭಿನಂದಿಸಿದರು ಶ್ರೋತೃಗಳು

ಎನಗಿತ್ತರು ಘಮ ಘಮಿಸುವ ಅತ್ತರು ದೊರೆತವು ಸಿರಿ ಸಮ್ಮಾನಗಳು

ಈ ಪರಿ ಸ್ವರ ಸಂಗೀತದ ಸೇವೆಯೆ ಎನಗಾದುದು ಜೀವನದುಸಿರು
ನನ್ನಯ ಸಾಧನೆ ಮನೆತನಕೆಲ್ಲಕೆ ತಂದುದು ಬಹು ಒಳ್ಳೆಯ ಹೆಸರು

~~*~~

**೨೦. ~~ ಕನ್ನಡ ದುಂದುಭಿ ~~** ತಾಳ: ಕೆಹರವಾ

ಪುನರಾಧ್ಯಯನ ಪ್ರಾಶಿಕ್ಷಣ ಪಡೆಯಲು ಮೊದಲಿಗೆ ತಮಿಳಿನ ನಾಡಿನಲಿ
ಅಣ್ಣಾಮಲಯದ ವಿದ್ಯಾಲಯದಲಿ ಸೇರಿದೆ ಒಂದು ಪ್ರಸಂಗದಲಿ
ಅಲ್ಲಿಯ ಎಲ್ಲ ಪರೀಕ್ಷೆಗಳಲ್ಲಿಯು ಯಶಗಳಿಸಿದೆ 'ಎ' ಶ್ರೇಣಿಯಲಿ
ಆಗ ಎನ್ನ ಸಂಗೀತ ಕಚೇರಿಯು ನಡೆದುದು ಅತಿ ಸಂಭ್ರಮದಲ್ಲಿ
ಎರಡನೆ ಸಲದ ಪ್ರಶಿಕ್ಷಣ ಲಖನೌ ಭಾತಖಂಡೆ ವಿದ್ಯಾಲಯದಿ
ನಡೆದಿರೆ ಅಲ್ಲಿಯು ಬೆಳೆಸಿದೆ ಸ್ನೇಹವ ಸಂಗೀತಜ್ಞರ ಪರಿಚಯದಿ
ನಡೆದುದು ಆಗಲು ಸಂಗೀತದ ಸಭೆ ಹಾಡಿದೆ ಅತಿ ಶ್ರುತಿ–ವೈಭವದಿ
ಮೆಚ್ಚಿಸಿದೆನು ರಸಿಕರ ವೃಂದದ ಮನ ಅಲ್ಲಿಯು ಉತ್ತರ ಭಾರತದಿ
ಮೂರನೆ ಹಂತದ ಅಧ್ಯಯನಕೆ ನಾ ಕೇರಳದಲಿ ಪಯಣವ ಬೆಳೆಸಿ
ತಿರುವನಂತಪುರ ವಿದ್ಯಾಲಯದಲಿ ಪಳಗಿದೆನಾ ಗೌರವ ಗಳಿಸಿ
ನಗರದಲ್ಲಿ ಲಭಿಸಿತು ಸಂದರ್ಭವು ನಡೆಸಲು ಸಂಗೀತೋತ್ಸವವ
ತ್ರಿವೇಂದ್ರಮ್ಮದಲ್ಲಿಯು ಸಂಗೀತದ ಪ್ರಸ್ತುತಿಯಲಿ ಪಡೆದೆನು ಯಶವ
ಈ ತೆರ ಬರಿ ಕರ್ನಾಟಕವಲ್ಲದೆ ಹೊರನಾಡುಗಳಲು ಹೆಸರಾಯ್ತು
ಸಂಗೀತದ ಕನ್ನಡ ದುಂದುಭಿಯನು ದೇಶದಿ ಮೊಳಗಿಸಿದಂತಾಯ್ತು

~~*~~

**೨೧. ~~ ತೃಪ್ತಿ ~~** (ರೂಪಕ ತಾಳ)

ಮಾರಣಾಂತಿಕವಾದ ಬೇನೆಯ ಅನುಭವಿಸಿ ನಾ ಉಳಿದು ಬಂದೆನು
ಎಲ್ಲವೂ ಪತಿಕರುಣೆಯದು ಮರು ಜನುಮವನು ಪಡೆದೆ
ಮತ್ತೆ ಕೈಬಿಡಲಿಲ್ಲ ನಾ ಸಂಗೀತ ಸಾಧನೆ ಮುಂದುವರಿಸಿದೆ
ಸಭೆ ಸಮಾರಂಭಗಳ ವೇಳೆಗೆ ಗಾಯನವ ಗೈದೆ
ನನ್ನ ಗಾಯನ ಪ್ರತಿಭೆ ಬೆಳಗಿತು ನಾಡಿನಲು ಹೊರನಾಡುಗಳಲೂ
ಧಾರವಾಡದಿ ಬೆಂಗಳೂರಲಿ ಬೈಲಹೊಂಗಲದಿ
ಗಾನಸಭೆ ವಿಜೃಂಭಿಸಿದುವಾ ಆಂಧ್ರ ಹೈದ್ರಾಬಾದದಲ್ಲಿಯು
ಮಹಾರಾಷ್ಟ್ರದ ಗಡಿಗಳಲಿ ಮುಂಬೈಯ ಪಟ್ಟಣದಿ
ಜೊತೆಗೆ ತಬಲಾ ಸಾಥ ನೀಡುತಲಿದ್ದವರು ಶ್ರೀ ಬಸವರಾಜರು
ಆವಟೆ ನಾಕೋಡರವರೂ ನಮ್ಮ ಶಶಿಧರನೂ
ಪೇಟಿ ನುಡಿಸಲು ಶೇಷಗಿರಿ ಗುರು ರಾಮರಾವ ಬಿಜಾಪುರೇಯರು
ಮರೆಯೆ ಕನಕಾಪೂರರನು ಯತ್ನಾಳರವರನ್ನೂ
ನೆನೆವೆ ಎನ್ನಯ ಪತಿಯು ನೀಡಿದ ಅತುಲ ಪ್ರೋತ್ಸಾಹನೆಯ ಸಭೆಯಲಿ
ತಂಗಿ ರೇಣುಕ ಮಗಳು ಅಶ್ವಿನಿ ಶಿವಕುಮಾರರನೂ

ಹೀಗೆ ಸಕಲರು ಸಹಕರಿಸಿ ಯಶ ದೊರೆಯುವಂತೆಯೆ ಮಾಡಿದರು ಸಲೆ
ಸಫಲವಾದುದು ಜನುಮ ಎನಿಸಿತು ಪಡೆದೆ ತೃಪ್ತಿಯನು

~~*~~

**೨೨.~~ ಸಂಗೀತದ ಸುಂದರ ಪರಿಸರ ~~** (ತಾಳ: ಕೆಹರವಾ)

ಸಂಗೀತದ ಸುಂದರ ಪರಿಸರವಿದು । ನಮ್ಮ ನಿವಾಸವು ಊರಿನಲಿ
ಧಾರವಾಡ ಹೊಸಯಲ್ಲಾಪೂರದ । ಲಕಮನಹಳ್ಳಿಯ ಓಣಿಯಲಿ
ದೇಶವಿದೇಶದಿ ಹೆಸರಾಗಿಹ ಗಂ।ಗೂಬಾಯಿಯ ಮನೆಯೂ ಇಲ್ಲಿ
ನಮ್ಮಯ ನೆರೆಹೊರೆಯಲ್ಲಿಯೆ ಇರುವುದ ಬರೆದಿದೆ ನಮ್ಮಯ ಭಾಗ್ಯದಲಿ
ಸಂಗೀತದ ಸೌರಭ ಸೂಸುತಲಿಹ । ನಮ್ಮ ಪುರಾತನ ಮನೆತನವು
ತಿಪ್ಪುಮ್ಮಜ್ಜಿಯ ತಲೆಯಲಿ ತುಂಬಿದೆ ಜನಪದ ಹಾಡಿನ ಸಂಪದವು
ಓಣಿಯ ಮನೆಮನೆಯಲಿ ಕಲೆ ವಿಧ ವಿಧ ಐರಸಂಗ ಕವಿ ಇಲ್ಲಿಹರು
ಗಾಯನ ಪಂಡಿತ ತೊರವಿ ವಿನಾಯಕ, ನಾಡಗೇರ ಗಾಯಕಿಯವರು
ನೆರೆಮನೆಯಲಿ ಕೊಟಬಾಗಿಯ ಅಜ್ಜನು। ನನ್ನಯ ನೃತ್ಯಕೆ ಮೆಚ್ಚುತಲಿ
ಕರೆದೊಯ್ದನು ಸಂಗೀತದ ಶಾಲೆಗೆ। ನಡು ರವಿವಾರದ ಪೇಟೆಯಲಿ
ನನ್ನಯ ಹೊಸ ಸಂಗೀತದ ಶಿಕ್ಷಣ। ದಂಡಾಪೂರರ ಆಶ್ರಯದಿ
ನಡೆದುದು ಸುಲಲಿತವಾಗಿಯೆ ಪಾಠವು । ಗುರು ಪರಂಪರೆಯ ಅನುನಯದಿ
ಬಂಧು ಸುಧೀಂದ್ರರು ಶೇಷಣ್ಣವರನು। ಅನುಸರಿಸುತೆ ಸಂಗೀತದಲಿ
ಶಿಶುಶಿಷ್ಯಂದಿರ ಬಹು ಪಳಗಿಸಿದರು ಸಂಗೀತದ ಅಭ್ಯಾಸದಲಿ
ಹಾಡುವ ವಿದ್ಯೆಯ ತ್ವರಿತದಿ ಕಲಿತೆನು ಮೆಚ್ಚುಗೆ ಪಡೆದೆನು ಸಭೆಗಳಲಿ
ಹಸಿವಾದೊಡೆ ಮೃಷ್ಟಾನ್ನಗಳೆನ್ನುತೆ ಹಾಡಿದೆ ಇಂಪಿನ ಧ್ವನಿಗಳಲಿ
ಮೆಚ್ಚುತೆ ಎನ್ನಯ ಗಾನಕೆ ಶ್ರೀಗುರು ಪುಟ್ಟರಾಜ ಪಂಡಿತರವರು
ತೊಡಿಸಿದರೆನ್ನಯ ಕೊರಳಿಗೆ ಮಾಲೆಯ ಮನದಲಿ ಸಂತಸ ಸೂಸಿದರು
ವಿರೂಪಾಕ್ಷ ಶಶಿಧರ ಪಾಟೀಲರು ತಬಲಾ ಸಾಥಿಗೆ ಇರುತಿರಲು
ತಂಗಿ ಸುಮಿತ್ರಾ ಪೇಟಿಯ ಹಿಡಿದಳು ರೇಣುಕ ಹಿಂಬದಿ ಹಾಡಿದಳು
ಸಂಗೀತದ ಸಾಗರದಲಿ ತೇಲಿತು ಎನ್ನಯ ಬಾಲ್ಯದ ಜೀವನವು
ತಂದೆ ತಾಯಿ ಗುರು ಹಿರಿಯರ ಕೃಪೆಯಿಂದಾದುದು ಮನೆ ನಂದನವನವು

~~*~~

**೨೩. ~~ ಛಲದಂಕ ಮಲ್ಲ ~~** (ಝಪತಾಳ)

ನೀ ಬರಿಯ ಮಲ್ಲಿಕಾರ್ಜುನನಲ್ಲ ನಲ್ಲ ನೀ।
ಛಲದಂಕಮಲ್ಲ ನೀ ಎಲ್ಲವನು ಬಲ್ಲ
ನಿರ್ಧರಿಸಿದಾ ಕೆಲಸ। ಮಾಡಿ ಮುಗಿಸುವ ಛಲವು
ಕರ್ತೃತ್ವಶಕ್ತಿ ಇದೆ। ದುಡಿಮೆಯಲಿ ಒಲವು
ಆಂಗ್ಲ ಸಾಹಿತ್ಯದಲಿ। ಉಚ್ಚ ಶಿಕ್ಷಣ ಪದವಿ
ನಿನ್ನಂಥ ಪತಿಯನ್ನು । ಪಡೆದ ನಾನೇ ದೈವಿ ॥ ೧ ॥
ನಿನ್ನಿಂದ ಪಡೆದಿಹೆನು। ನಾನು ಬಹು ಸ್ಫೂರ್ತಿಯನು

ಬರೆದಿಹೆನು "ಸ್ವರಯಾತ್ರೆ" ಎಂಬಾತ್ಮಚರಿತೆಯನು
ಧ್ವನಿ ಮುದ್ರೆ ಸಾಕ್ಷಚಿತ್ರಂಗಳಿಗೆ ನಿರ್ಮಾತೃ
ರೈತ ಕಲ್ಲಪ್ಪನಾ ಕಾದಂಬರಿಯ ಕರ್ತೃ ॥ ೨ ॥

ನಿನ್ನಲ್ಲಿ ಇಹುದಯ್ಯ ಸೃಜನಶೀಲತೆ ಯುಕ್ತಿ
ನಿನ್ನಲ್ಲಿ ಇಹುದಯ್ಯ ದುಡಿದು ಗಳಿಸುವ ಶಕ್ತಿ
ಎಂದಿಗೂ ಬಿಡಲಿಲ್ಲ ಪರಮಾತ್ಮನಲಿ ಭಕ್ತಿ
ತುಂಬಿಹುದು ಹೃದಯದಲಿ ಸಂತರಂಥ ವಿರಕ್ತಿ ॥ ೩ ॥

ರಾಮ ವನವಾಸದಲಿ ಅನುಭವಿಸಿದಂತೆಯೇ
ವಿರಹವನು ಸಹಿಸಿರುವೆ ಓ ಎನ್ನದೊರೆಯೇ
ನೀ ನಿತ್ತ ಪ್ರೋತ್ಸಾಹ ಬಲದಿಂದಲೇ ಪ್ರಗತಿ
ನಿನ್ನ ನೆನಹೇ ಎನಗೆ ಇಹಪರದ ಸಂಗಾತಿ ॥ ೪ ॥

**೨೪. ~~ ಕಠಿಣ ಪ್ರಸಂಗ ~~** (ರೂಪಕ ತಾಳ)

ಬಹಳ ಕಠಿಣ ಪ್ರಸಂಗವದು ಸಲೆ ಪತಿಯು ತಂದೆಯ ಮಧ್ಯದಿ
ಇವರ ಹಿತಸಂಬಂಧವಳಿದುದು ಕಾಸಿನಾ ವ್ಯವಹಾರದಿ
ಮನೆಯಲಿಂತಹ ಪರಿಸರವು ಬೀ।ರಿಹುದು ದುಷ್ಪರಿಣಾಮವ
ಹಳಹಳಿಸಿನಾ ಕಳೆದು ಕೊಂಡೆನು ನನ್ನ ದೇಹಾರೋಗ್ಯವ

ಎನಿತು ವೇದನೆ ಸಹಿಸಿದೆನು ನಾ। ಅಸ್ತಮಾ ಕಾಯಿಲೆಯಲಿ
ಉಸಿರು ಕಟ್ಟಿತು ಜೀವ ವಿಹ್ವಲ। ಸಹಿಸಲಾಗದ ನೋವಲಿ
ಹಿರಿಯರೆಲ್ಲರು ಕೂಡಿ ಎನ್ನನು, ಒಯ್ದಿಹರು ಆಸ್ಪತ್ರೆಗೆ
ಅಲ್ಲಿ ವೈದ್ಯರು ಯತ್ನಗೈದರು। ಉಸಿರ ತೊಂದರೆಯಳಿಮೆಗೆ

ಸಿಗದೆ ಹೋದುದು ಶ್ವಾಸ ಸಮುಚಿತ। ಉಪಕರಣ ಆ ವೇಳೆಗೆ
ಕಠಿಣವಾದುದು ಶೋಧಿಸಲು ಪರಿಹಾರ ಎನ್ನಯ ವ್ಯಾಧಿಗೆ
ಸಾಧ್ಯವಿಲ್ಲವು ಎಮ್ಮಸೂರಲಿ ಗುಣಪಡಿಸಲೀ ಬೇನೆಯ
ಸಾಗಿಸಿರಿ ರೋಗಿಯನು ಬೇಗನೆ ಕೆಎಲ್‌ಇಗೆ ಬೆಳಗಾವಿಯ

ಇಂತು ಸಲಹೆಯ ಪಡೆದ ಪತಿಯತಿ–ಕ್ಷಿಪ್ರದಲಿ ಸ್ಪಂದಿಸುತಲಿ
ತಂದರೆನ್ನನು ವಾಹನದಿ ಉಪಚರಿಸೆ ಕೇಎಲ್ಲೀಯಲಿ
ಅದುವೆ ಎನ್ನ ಸುದೈವ ಸಾವಿನ ಕುತ್ತಿನಲಿ ಪಾರಾದೆನು
ಮರಳಿ ಮನೆ ಸೇರಿದೆನು ನಡೆಸಿದೆ ನೆಮ್ಮದಿಯಲೀ ಬಾಳನು

~~*~~

**೨೫. ~~ ನಂದ~~** (ಝಪತಾಳ)

ಅಂದ ರಾಗದಿ ನಂದ, ಹಾಡೊಂದ, ಹಾಡುತಿರೆ
ಏನೊಂದು ಸಂತಸ ರಸಿಕವೃಂದಕೆ
ತೇಲಾಡಿದೊಲು ಮನವು, ತಿಳಿನೀರ ತಂಗೊಳದಿ
ಪಾರವಿಲ್ಲವು ಜನರ ಆನಂದಕೆ

ನಂದಾಳ ಚರಿತೆಯದೆ ರಸಭರಿತ ನದಿಯಹುದು
ಸಂಗೀತ ಸುಧೆಯಾಗಿ ಪ್ರವಹಿಸುವದು
ಶ್ರುತಿ ಸರೋವರ ಜಲದಿ ವಿಕಸಿತ ಹೃದಯಕಮಲ
ರಾಗ ವಿದುಷಿಯ ಕಲೆಯ ಕುಶಲತೆ ಇದು

ಛಲ ಬೇಕು ಶರಣಂಗೆ ಪರಧನವ ನೊಲ್ಲೆನೆಂಬ
ಎಂಬ ವಚನವ ಹಾಡಿ ಜನಮನಗಳ
ತಣಿಸಿಹಳು ಶ್ರೋತೃಗಳ ಪ್ರೋತ್ಸಾಹನೆಯ ಪಡೆದು
ಗಳಿಸಿಹಳು ಅವರ ಶುಭ ಕಾಮನೆಗಳ

**೨೬. ~~ ನಂದಳ ಚರಿತೆ ~~** ತಾಳ : ಕೆಹರವಾ

ಹಬ್ಬವು ನಂದಳ ಚರಿತೆಯ ಬರೆವುದು ಉಬ್ಬುವುದೆದೆ ಅತಿಹರುಷದಲಿ
ವಿದ್ಯೆಯ ಗಣಿ ಸ್ವರ ಸಂಗೀತದ ಖಣಿ ಬಣ್ಣಿಸುವೆನು ನಾ ಸರಸದಲಿ
ಸ್ವರದಲಿ ಸುಮಧುರ, ರಾಗದಿ ಸುಂದರ ಬಂಧುರ ಭಾವವು ಮನದಲ್ಲಿ
ಸಂಗೀತದ ಗಂಧರ್ವರ ಲೋಕವೆ ಬಂದಿಳಿದುದು ಎನ್ನೆದುರಲ್ಲಿ
ನಾಡಿನ ಸಹೃದರ ಹೃದಯವ ಗೆದ್ದಿಹ ವಚನ ಗಾಯಕಿಯು ನಂದಕ್ಕ
ಸಂಗೀತದ ಸುಧೆ. ಸುಜನರಿಗುಣಿಸುತೆ ಮನ ರಂಜಿಸುವಳು ಬೆಳತನಕ
ವಚನ ಪ್ರಕಾರದ ಲಘು ಸಂಗೀತವು ಪ್ರಿಯವಾದುದು ಬಹುಜನಮನಕೆ
ವಚನ ಪಿತಾಮಹ ಹಳಕಟ್ಟಿಯರಾ ಶ್ರಮ ಸಾರ್ಥಕತೆಯ ಪಡೆವುದಕೆ
ಶ್ರೀಮತಿ ನಂದಾ ವಚನದ ಗಾಯನ ಗೈದಳು ಬಹು ಸಭೆಗಳ ನಡೆಸಿ
ಜಗವ ಸುತ್ತಿರುವುದು ನಿನ್ನಯ ಮಾಯೆಯು ಎಂಬುವುದಕೆ ಸ್ವರ ಅಳವಡಿಸಿ
ಉಳ್ಳವರು ಶಿವಾಲಯ ಮಾಡುವರೆಂಬುವ ವಚನವನೂ ಸಹ ಹಾಡಿಹಳು
ಈ ಪರಿ ವಿಧವಿಧ ವಚನದ ಗಾಯನ ಮಾಡುತ ಬಹು ಹೆಸರಾಗಿಹಳು

**೨೭. ~~ ಮಕ್ಕಳ ಸಂವಾದ ~~** (ತಾಳ: ಕೆಹರವಾ)

ಅಶ್ವಿನಿ: ನಮ್ಮವ್ವ ಯಾವಾಗ ಬರತಾಳ ಯಕ್ಕಾ, ನಮ್ಮವ್ವ ಯಾವಾಗ ಬರತಾಳ
ಏಸ ದಿನಾ ಅಂತ ಕಾಯಬೇಕ ನಾ ನಮ್ಮವ್ವ ಯಾವಾಗ ಬರತಾಳ
ಯಕ್ಕ, ನಮ್ಮವ್ವ ಯಾವಾಗ ಬರತಾಳ ।
ಅಕ್ಕ: ತಂಗೀನಿ ಚಿಂತೀ ಮಾಡಬ್ಯಾಡ । ತಡಿ, ನಿಮ್ಮವ್ವ ನಾಳಿಗಿ ಬರತಾಳ
ನಿಮ್ಮವ್ವ ನಾಳಿಗಿ ಬರತಾಳ ತಂಗಿ । ನಿಮ್ಮವ್ವ ನಾಳಿಗಿ ಬರತಾಳ
ಅಶ್ವಿನಿ: ಬರತಾಳ ಬರ್ತಾಳಂತ ಅನಕೋತನ ನೀ ಏನಾರ ಹೇಳಿ ಸುಮ್ನಾಗಸತೀ
ನಮ್ಮವ್ವ ಯಾವಾಗ ಬರ್ತಾಳ ಹೇಳಕ್ಕಾ । ನಮ್ಮವ್ವ ಯಾವಾಗ ಬರತಾಳ
ಅಕ್ಕ: ತಾಳ ತಾಳ ತಂಗಿ ಬರತಾಳ, ತಂಗಿ, ನಿಮ್ಮವ್ವ ನಾಳಿಗಿ ಬರತಾಳ
ಸಿಟ್ಟಿಗೆದ್ದ ಕೇಳ್ಯಾಳ ಅಶ್ವಿನಿ – ನಮ್ಮವ್ವ ಯಾವಾಗ ಬರತಾಳ
ಅಕ್ಕ: ಸಿಟ್ಟಿಗೇಳಬ್ಯಾಡ ತಂಗೆವ್ವ ನೀ ಹಿಂಗ । ನಿಮ್ಮವ್ವ ನಾಳಿಗಿ ಬರತಾಳ
ನಾಳಿಗಿ ಬಂಧ ಬರತಾಳ, ತಂಗಿ । ನಿಮ್ಮವ್ವ ನಾಳಿಗಿ ಬರತಾಳ

~~*~~

**೨೮. ~~ ನಂದಾಳನ್ನ ನೋಡಾಕ ತಾಯಿ ಚೆನ್ನವ್ವ ದವಾಖನಿಗೆ ಬಂದಾಗ ~~**

ತಾಳ: ಭಜನ ಠೇಕಾ / ಕೆಹರವಾ

ದವಾಖಾನಿಗೀ ಅವ್ವ ಬಂದ ದಿನ, ಮನಸೀಗೆ ಆನಂದ ಆಗೇತಿ
ತಾಯಿ ನನ್ನ ನೋಡ್ಯಾಳು ಮತ್ತ ಅಕಿ ನುಡದ ಮಾತು ಅದು ಹೀಂಗ್ಯೆತಿ
ತಾಯಿ: ಲಗೂ ಮಗಳ ನೀ ಆರಾಮಾಗಿಯೆ ಮರಳಿ ಮನಿಗೆ ಬಂಧ್ವ ಬರತಿ
ಮನಿಗಿ ಬಂದು ಎಲ್ಲಾರ ಮನಸಿಗೂ ಸಮಾದಾನ ಸಂತಸ ತರತಿ
ಹೆದರಬ್ಯಾಡ ಶಿವ ಅದಾನ ತಾಯೀ ಕೈಯ್ಯಬಿಡದನ್ವ ಕಾಯುವನ
ಮುತ್ತಿನಂತ ನಿನ ಮಕ್ಕಳೆರಡನೂ ಮರೆಯದನ್ವ ಅವ ನೋಡುವನ್ವ
ಎಲ್ಲಾನು ಆ ಮಾದೇವನ ಕರುಣೆಯು, ಗುಣಾ ಆಗಿ ನಾ ಬಂದೇನಿ
ಮಕ್ಕಳ ಮಾರೀ ನೋಡಿ ನಲಿದೆ ಆ ಶಿವನ ಮನದಲೇ ನೆನದೇನಿ

**ಸಂಗೀತ** (ಭಜನ ಠೇಕಾ/ ಕೆಹರವಾ)

ಜಾತಿ ಭೇದದಾ ಸೋಂಕು ಇಲ್ಲದಾ, ನಿಷ್ಕಳಂಕ ಸಂಗೀತವಿದು
ತಂದೆಯ ಯತ್ನದಿ ದೊರೆತುದು ಎನಗಿದು ಎನ್ನಯ ಸಂಪದವಾಗಿಹುದು
ಸಂಗೀತಕಲಾಸಕ್ತರು ಎನ್ನಯ ತಂದೆಯು ಕಾಳಜಿಯನು ವಹಿಸಿ
ಸಂಗೀತದ ಶಾಲೆಗೆ ಕಳುಹಿಸಿದರು ಸ್ವರಸಾಧನೆ ಗುರಿಯನು ಇರಿಸಿ
ಪಾಠಶಾಲೆಯಲಿ ಪ್ರಗತಿಯ ಸಾಧಿಸಿ ಕರ್ನಾಟಕ ವಿದ್ಯಾಲಯದಿ
ಗಳಿಸಿದೆ ಪದವಿಯ ಪೀಎಚ್ಡಿಯ ಸಹ, ದುಡಿದಿಹೆ ಪ್ರಾಧ್ಯಾಪಕ ಪದದಿ
ಸ್ತ್ರೀಯರಿಗೂ ಸಹ ಪ್ರೋತ್ಸಾಹನೆಯನು ನೀಡಲು ಅವರೂ ಬೆಳೆಯುವರು
ಎಂಬುವದಕೆ ಎನ್ನಯದೇ ಸಾಕ್ಷಿಯು ಮಕ್ಕಳು ಸಹಭಾಗಿಯರಿಹರು

**೨೯. ~~ ಅಂದಿನಾ ಶುಭಗಳಿಗೆ ~~** (ತಾಳ: ಕೆಹರವಾ)

ರಾಯನಗೌಡರು ಬಸನಗೌಡರೂ ಬಂದು ಅಂದಿನಾ ಶುಭಗಳಿಗೆ
ಮಲ್ಲಿಕಾರ್ಜುನಗೆ ಕನ್ಯೆಯ ಕೇಳಲು ಬಂದೆವು ಎಂದರು ನಮ್ಮನೆಗೆ
ತಂದೆಯಣ್ಣ ರುದ್ರಪ್ಪನವರು ಬಂದೆಲ್ಲವರನು ಬಹು ಆದರದಿ
ಸ್ವಾಗತಿಸುತೆ ಮಾತಾಡಲು ಒಪ್ಪಿಗೆ ಇತ್ತರು ಆದಿನ ಸಂಭ್ರಮದಿ
ನೀಲಿಯ ಬಣ್ಣದ ಪೂನಂ ಸೀರೆಯ ಉಡಿಸಿ ಕುರ್ಚೆಯಲಿ ಕೂಡ್ರಿಸುತೆ
ಹಿರಿಯರು ನನ್ನನು ತೋರಿಸಿದರು ವರ ಮಲ್ಲಿಕಾರ್ಜುನಗೆ ನೋಡೆನುತೆ
ಸಡಗರದಲಿ ನಾ ಕೂತಿಹ ದೃಶ್ಯವ ನೋಡುತ ಅತಿ ಸಂತಸಗೊಂಡು
ಸೇಬಿನಂತೆ ನಾ ಕಂಡೆನು ವರನಿಗೆ ಎಂದುದು ನೆನಪಿದೆ ನನಗಿಂದೂ
ಕೊಡುವ ತಗೊಳ್ಳುವದೆಲ್ಲವ ಇಬ್ಬರು ಅನುನಯದಲಿ ಮಾತಾಡಿದರು
ಕೂಡಿದ ಹಿರಿಯರು ಸಹ ಸಂಭ್ರಮದಲಿ ಮದುವೆಗೆ ನಿಶ್ಚಯ ಮಾಡಿದರು
ರಾಣೀಬಣ್ಣದ ರೇಶಿಮೆ ಸೀರೆಯ ನೀಲೀ ಬಣ್ಣದ ಕುಪ್ಪಸವ
ತೊಟ್ಟು ಕುಳಿತೆನಾ ಮಲ್ಲಿಕಾರ್ಜುನರ ಬದಿಯಲಿ ಸೂಸುತ ಸಂತಸವ
ಅರ್ಧ ತೊಲೆಯ ಬಂಗಾರದ ಉಂಗುರ ತೊಡಿಸಲೆನಗೆ ರೋಮಾಂಚನವು
ಮದುವೆಯ ಉಂಗುರವಿದು ನಿನಗೆನ್ನಲು ನಲಿದಾಡಿತು ಎನ್ನಯ ಮನವು
ಕೂಡುತಲಿದ್ದೆವು ವಿದ್ಯಾನಿಲಯದ ತೋಟದಿ ನಾವಿಬ್ಬರು ಜೋಡಿ
ಬರೆದರೆನ್ನವರು ಪ್ರಣಯಗೀತೆಗಳ ವಿಹರಿಸುತಿರೆ ಸೌಖ್ಯದಿ ಕೂಡಿ
ಸ್ವತಂತ್ರವಾಗಿಯೆ ಬೆಳೆದ ವ್ಯಕ್ತಿ, ಪತಿ। ಬಹಳ ಸರಳ ಭಾವನೆಯವರು
ಶಿಸ್ತಿನವರು ಸಾಹಿತ್ಯಾಸಕ್ತರು। ದುಶ್ಚಟದಿಂ ದೂರಿರುವವರು
ಧಾರವಾಡ ನಗರೇಶ್ವರ ಗುಡಿಯಲಿ । ನಡೆದುದಂದು ನಮ್ಮಯ ಮದುವೆ

ಅದರಲ್ಲಿಯೆ ತಂಗಿಯ ಮದುವೆಯು ಸಹ। ಆದುದು ಎಲ್ಲರಿಗೂ ಸೊಗವೆ

~~*~~

**೩೦. ~~ಮುನ್ನುಡಿ ~~** (ತಾಳ: ಕೆಹರವಾ)

ನಿವೃತ್ತ ಕುಲಪತಿ ಜವರೇಗೌಡರು ಡಾಕ್ಟರ್ ನಂದಾ ಚರಿತೆಯನು
ವೀಕ್ಷಿಸಿ ಬರೆದಿಹ ಮುನ್ನುಡಿಯಲಿ ನಾ ಅರ್ಥಪೂರ್ಣತೆಯ ಕಂಡಿಹೆನು
ಸಂಗೀತದ ಪರಿಸರದಲೆ ಬಾಲ್ಯದಿ ನಂದಾ ಬೆಳೆದುದು ಇರುತಿರಲು
ಸಂಗೀತದಿ ತಾ ಜಾಣೆಯಾಗಿಯೇ ತನ್ನಯ ಪ್ರತಿಭೆಯ ತೋರಿದಳು
ತಂದೆಯು, ಗುರುಗಳು, ನಂತರ ಪತಿ ಸಹ ನಂದಕ್ಕಗೆ ಪ್ರೇರಣೆ ಇತ್ತು
ನಾಡಲು ಹೊರನಾಡಲು ಸಹ ಆಕೆಗೆ ಆದರಣೆಯು ದೊರೆವಂತಾಯ್ತು
ಸಂಗೀತದ ಜೊತೆ ಸಾಹಿತ್ಯದಲೂ ಸರಸತಿ ಇವಳಿಗೆ ಒಲಿದಿಹಳು
ಬಸವರಾಜಗುರು ಬಾಳಪ್ಪನವರ ಚರಿತೆಗಳಾಗಿವೆ ಸಾಕ್ಷಿಗಳು
ಶರಣರ ವಚನಗಳನು ನಂದಕ್ಕನು ಜೋಡಿಸಿ ಹಾಡುತೆ ಎಲ್ಲೆಡೆಯೂ
ವಿಶ್ವಕೆ ವಚನಗಳಲ್ಲಿಹ ಮಹತಿಯ ಸಾರಿದುದೊಂದು ವಿಶೇಷತೆಯು
ಸಂಗೀತದಿ ಸಂಶೋಧನೆ ಗೈಯುತ ನಂದಾ ಬರೆದಿಹ ಸಾಹಿತ್ಯ
ಪಡೆದುದು ಪದವಿಯ ವಿದ್ಯಾಲಯದಲಿ ನಾಡಲಿ ಆದರ ಆತಿಥ್ಯ
ಮಲ್ಲಿಕಾರ್ಜುನರ ಯತ್ನದಿ ಆದುದು ದತ್ತಿಯ ಯೋಜನೆ ಪ್ರತಿ ವರುಷ
ವಿದ್ಯಾವರ್ಧಕ ಸಂಘದಿ ನಡೆದಿದೆ ನೀಡುತೆ ರಸಿಕರಿ ಗತಿ ಹರುಷ

~~*~~

**೩೧.~~ವೇದನೆ~~** (ಝಪತಾಳ)

ಮನೆಯಲ್ಲಿ ಏನನೋ ಕಳೆದುಕೊಂಡಿಹ ತೆರದಿ।
ತೋರಿತದು ಎನಗೆ ಬಣ। ಗುಡುವಂತೆಯೆ॥
ಕರುಳ ಕುಡಿಯನು ದೂರ ಮಾಡಿದೊಲು ವೇದನೆಯು।
ಆದುದು ಹೃದಯ ಭಾರವಾದಂತೆಯ ॥೧॥
ಮದುವೆಯಾಗದೆ ನಾನು ಸಂಗೀತ ದೇವತೆಯ
ಸೇವೆಯಲಿ ತೊಡಗಿಕೊಂಡಿರಲೆನ್ನುವಾ
ನನ್ನ ತಂದೆಯ ಕನಸು ಭಂಗವಾದಂತೆಯೇ
ಆ ಸಮಯದಲಿ ಆದುದ್ಯೆ ಅನುಭವಾ
ನಂದಾ ಮದುವೆಯಾಗಿ ಹೋದ ನಂತರ ನಮ್ಮ
ಸ್ಥಿತಿಯು ಹದಗೆಡುವದೆಂ।ಬುವ ಚಿಂತೆಯು
ಮೂಡಿ ಕಳವಳಗೊಂಡು ಮನೆಯ ಜನರೆಲ್ಲರೂ
ನೊಂದಿರಬ।ಹುದು ಎಂದು ಅನಭೂತಿಯು
ತಾವರಿಯ ಗಿಡ ಹುಟ್ಟಿ ದೇವರಿಗೆ ನೆರಳಾದೆ
ನಾ ಹುಟ್ಟಿ ಮನೆಗೆ ಎರವಾದಂತೆಯೆ
ಎನ್ನ ಮನೆಯವರೆಲ್ಲ ತಿಳಿದುಕೊಂಡಿರಬಹುದು
ಎಂಬ ಅನುಮಾನವೂ ಎನ್ನಲ್ಲಿಯೆ
ಹೆಣ್ಣೆಂಬುದೊಂದು ದಿನ ಮದುವೆಯಾಗಲೆಬೇಕು
ಆಕೆಯದು ಒಂದು ಜೀ–ವನವಲ್ಲವೇ
ಈ ಬಗೆಯ ಗರತಿಯರ ಹಾಡೊಂದು ಜನಪದದಿ
ಇಹುದಲ್ಲ ನೀವದನು ಕೇಳಿಲ್ಲವೇ

ಹೆಣ್ಣು ಹಡಿಯಲಿ ಬ್ಯಾಡ, ಹೆರವರಿಗೆ ಕೊಡಬ್ಯಾಡ
ಹೆಣ್ಣು ಹೋಗುವಳೆಂದು ಅಳಬ್ಯಾಡ
ಹೆಣ್ಣು ಹೋಗುವಳೆಂದು ಅಳಬ್ಯಾಡ ಹಡದವ್ವ
ಸಿಟ್ಟಾಗಿ ಶಿವನಬೈಬ್ಯಾಡ
ಇದನೆ ನಾ।ನನ್ನ ತಾಯ್। ತಂದೆಗಳಿಗರುಹುತಲಿ
ಸಂತೈಸುತಿದ್ದೆ ಅವರನು ಈಪರಿ
ಜಗದ ನಿಯಮವ ಮೀರಿ ಜೀವಿಸದು ಮನುಕುಲವು
ಎಂಬ ಹಿರಿಯರ ಮಾತು ನಿಜಕೂ ಸರಿ

~~*~~

**೩೨. ~~ಆಶೀರ್ವಾದ ~~** (ತಾಳ: ಕೆಹರವಾ)

ನೀಡಿದೆನಾ ಬಹು ಕಾರ್ಯಕ್ರಮಗಳ । ಆ ತೊಂಬತ್ತರ ದಶಕದಲಿ
ಒಂದು ಮಹತ್ವದ ಸಂಗೀತೋತ್ಸವ। ಬಸವನ ಬಾಗೇವಾಡಿಯಲಿ
ಕನ್ನಡ ಸಂಸ್ಕೃತಿ ಇಲಾಖೆಯವರೇ। ಕಾರ್ಯಕ್ರಮವನು ನಡೆಸಿದರು
ಶ್ರೀ ಕಲಬುರ್ಗೀ ಮಾಲಗತ್ತಿಯರು । ಉಪನ್ಯಾಸಗಳ ನೀಡಿದರು
ಶ್ರೀಮತಿ ನೀಲಾ, ಕೊಡ್ಲೀ ಶರಣರ ವಚನಗಳನ್ನೂ ಹಾಡಿದರು
ನಂತರ, ನನ್ನಯ ಗಾಯನ ಕೇಳುತೆ । ಮಂತ್ರಿ ಪ್ರಕಾಶರು ಮೆಚ್ಚಿದರು
ತಂದೆಯು ನನ್ನೀ ಗಾಯನ ಪ್ರಗತಿಗೆ ಪ್ರೋತ್ಸಾಹನೆಯನು ನೀಡಿದರು
ನಾನು ಇಂತು ಅ।ಪ್ರತಿಮ ಗಾಯಕಿಯು। ಆಗಲು ಆಶೀರ್ವದಿಸಿದರು

~~*~~

**೩೩. ~~ ಸಾಧನೆ ~~** (ತಾಳ: ಕೆಹರವಾ)

ತೊಂಬತ್ತೇಳನೆ ಇಸ್ವಿಯಲ್ಲಿ ನಾ ಕರ್ನಾಟಕ ವಿದ್ಯಾಲಯದಿ
ಮಾರ್ಗದರ್ಶಕಳ ಪದದಲಿ ನೇಮಕ ಆದುದು ಹೆಮ್ಮೆಯು ಚರಿತೆಯಲಿ
ಶಕ್ತೀ ಪಾಟೀಲಳು ನನ್ನಯ ಬಳಿ । ಪಿ ಎಚ್ ಡಿ ಯ ಅಧ್ಯಯನದಲಿ
ಗೈದಳು ಸಂಶೋಧನೆ ಸಂಗೀತದ ಚಿಕಿತ್ಸೆ ಎಂಬುವ ವಿಷಯದಲಿ
ಬಾಗಲಕೋಟೆಯ ಶ್ರೀ ಬಸವೇಶ್ವರ ವಿದ್ಯಾಲಯ ಅಧ್ಯಾಪಕರು
ಮಠಪತಿಯವರೂ ಸಂಗೀತದ ಸಾಹಿತ್ಯದಿ ಬಹು ಹೆಸರಾದವರು
ಇವರೂ ನನ್ನಯ ಮಾರ್ಗದರ್ಶನದಿ ಪಿ.ಎಚ್.ಡೀಯನು ಮಾಡಿಹರು
ಕುಮಾರ ಗಂಧರ್ವರ ಅನ್ವೇಷಣೆ ಸಂಶೋಧನ ಕೃತಿ ಬರೆದಿಹರು
ನನ್ನಯ ಸಾಧನೆಗಳ ಪರಿಗಣಿಸುತೆ ಕರ್ನಾಟಕ ಸರಕಾರವಿದು
ಸಂಗೀತ ಅಕ್ಯಾಡೆಮಿಯ ಸದಸ್ಯಳ। ಪದದಲಿ ಎನ್ನನು ಇರಿಸಿಹುದು
ಆ ಸಮಯದಿ ನಾ ಧಾರವಾಡದಾ ದಂಡಾಪುರ ದಾತಾರರಿಗೆ
ವೀರಣ್ಣರಿಗೂ ಶಾಸ್ತ್ರೀಯರಿಗೂ ಕೊಡಿಸಿದೆ ಪ್ರಶಸ್ತಿಗಳ ಕೊಡುಗೆ
ಉತ್ತರ ನಾಡಿನ ಕಲಾವಿದರ ಬಗೆ ವಿಶೇಷ ಆಸಕ್ತಿಯ ವಹಿಸಿ
ಆದರ ಗೌರವ ದೊರೆಯುವ ದಿಶೆಯಲಿ ದುಡಿದಿಹೆನಾ ಶ್ರದ್ಧೆಯನಿರಿಸಿ

೩೪. ~~**ಗುರುಪರಂಪರೆ** ~~ (ತಾಳ: ಕೆಹರವಾ)

ಗುರುಕುಲದಲಿ ಬರಿ, ಕೆಲವೇ ಶಿಷ್ಯರ  ಉತ್ತಮ ಶಿಕ್ಷಣ ಸಾಧ್ಯವಿದೆ
ಶಿಕ್ಷಣ ಮುನ್ನವೆ ಅರ್ಹತೆ ಗಳಿಸಲು  ಗುರು ಸೇವೆಯು ಕಡ್ಡಾಯವಿದೆ

ಗುರು ಒಲಿದಾಗಲೆ ಜ್ಞಾನದ ಪಾಠವು ತಾರತಮ್ಯವೂ ಶಿಕ್ಷಣದೆ
ಈಗ ಪ್ರಜಾತಂತ್ರದ ಕಾರಣವೇ ಸಕಲರ ಶಿಕ್ಷಣ ಸಾಧ್ಯವಿದೆ

ಶಾಲೆಗಳಲಿ ಗುರು ಜ್ಞಾನಿಯು ಇದ್ದರೆ ವಿದ್ಯಾಭ್ಯಾಸದಿ ಪ್ರಗತಿ ಇದೆ
ಗುರು ಬಲ್ಲಿದ ಇರೆ ಒಳ್ಳೆಯ ಶಿಕ್ಷಣ ವಿದ್ಯಾರ್ಥಿಗಳಿಗೆ ಸಾಧ್ಯವಿದೆ
ಗುರುಗಳೆ ಕಾರಣ ವಿದ್ಯಾರ್ಥಿಗಳಿಗೆ ಭವ್ಯ ಭವಿಷ್ಯವ ರೂಪಿಸಲು
ವಿದ್ಯಾರ್ಥಿಗಳೂ ನೆನೆವರು ಗುರುಗಳ ಕೃಪೆಯನು ಇಡಿ ಆಯುಷ್ಯದಲು

**೩೫. ~~ ಹೈದ್ರಾಬಾದದಿ ~~** **(ತಾಳ: ಕೆಹರವಾ)**

ಶ್ರೀ ಪಾಟೀಲರು ಹೈದ್ರಾಬಾದದಿ। ಇಂಗ್ಲೀಷ ಭಾಷಾಭ್ಯಾಸವನು
ಮಾಡುವ ಸಮಯದಿ ನಂದಾ ವಿದುಷಿಯ । ಗಾಯನ ಮಹತಿಯ ತಿಳುಹಿದರು॥
ಸಂಗೀತದಿ ನಂದಾ ಗೈದಿರುವಾ। ಸಾಧನೆ ವಿವರಗಳೆಲ್ಲವನು
ಪರಿಚಯ ಪತ್ರದಿ ಪ್ರಕಟಿಸಿ ಎಲ್ಲೆಡೆ । ವಿಶದ ಪ್ರಚಾರವ ಮಾಡಿದರು॥
ಹೈದ್ರಾಬಾದದ ಕನ್ನಡ ಸಂಘವ। ಮತ್ತೂ ಬಾನುಲಿ ಕೇಂದ್ರವನು
ಸಂಪರ್ಕಿಸಿ ಸಂಯೋಜಿಸಿದರು ಬಹು । ಸಭೆಗಳ ನಂದಾ ಹಾಡಲೆನೆ ॥
ಗುಲಬರ್ಗಾದಲಿ ಐವತ್ತೆಡೆಯಲಿ । ಸಂಗೀತದ ಉತ್ಸವಗಳಲಿ
ಸಾಧ್ಯವು ಆದುದು ನಂದಾ ತನ್ನಯ । ಗಾಯನ ಪ್ರತಿಭೆಯ ತೋರಲೆನೆ॥
ಶ್ರೀ ಶಿವರಾಜರು ಸೋಮಣ್ಣವರೂ । ಗಾಯನ ಸಭೆಗಳ ಏರ್ಪಡಿಸಿ
ಆಂಧ್ರ ಮಹಾರಾಷ್ಟ್ರದ ಗಡಿಗಳಲೂ । ನಂದಳ ಖ್ಯಾತಿಗೆ ಶ್ರಮಿಸಿದರು ॥
ನಂದಳ ಗಾಯನ ಜಾಣ್ಮೆಯ ಪರಿಚಯ । ನೆರೆ ರಾಜ್ಯಗಳಲಿ ಆಗುವೊಲು
ಸಹಾಯ ಗೈಯುತೆ ಆಕೆಯ ಮನದಲಿ । ಬಹು ಸ್ಮರಣೀಯರೆ ಎನಿಸಿಹರು ॥

~~*~~

**೩೬. ~~ಸರಸತಿಯ ವರದಾನವು ~~** **(ರೂಪಕ ತಾಳ)**

ಅಸ್ಖಲಿತ ಮನರಂಜನಾತ್ಮಕ, ಗೀತಗಾಯನ ಸ್ವರನಿಧಿ
ಪಂಡಿತಾಯಿನಿ ಜ್ಞಾನ ದಿನಮಣಿ ರಸಿಕ ಜನಮನ ಮೋದಿನಿ
ಶ್ರೀಮತಿಯು ನಂದಾ ಕಲಾವಿದೆ ವಚನಗಾನ ವಿಶಾರದೆ
ಸುಗಮ ಸಂಗೀತದಲು ಸಹ ನೈಪುಣ್ಯತೆಯು ಬಹುನಿನ್ನದೆ
ಖ್ಯಾತಿ ಇದೆ ಶಾಸ್ತ್ರೀಯಗಾಯನದಲ್ಲಿ ಬಹುಮುಖ ಪ್ರತಿಭೆಯು
ಹಸ್ತಗತವಾಗಿಹುದು ನಿನಗದು ಸರಸತಿಯ ವರದಾನವು

~~*~~

**೩೭. ~~ ದೇವರ ದೇಣಿಗೆ ~~** (ತಾಳ: ಕೆಹರವಾ)

ದೇವರ ದೇಣಿಗೆ ನಂದಾ ವಿದುಷಿಗೆ। ಸಂಗೀತದ ವರ ಅತಿ–ಶುಭವು
ಡಾಕ್ಟರ ನಂದಾ ಹಾಡಿದಳೆಂದರೆ । ಮೈಮನಗಳು ನವಿರೇಳುವವು
ಕೆಸರೆಂದಿತು ಕುಂಬಾರಗೆ ತುಳಿ ತುಳಿ । ತುಳಿಯುವೆ ಎನ್ನನು ಎನಿತು ದಿನಾ
ಎಂಬುವ ಹಾಡನು ಆಕೆಯು ಹಾಡಲು । ಕೇಳುತೆ ಕೇಳುತೆ ಸುಖಿಸಿದೆನಾ
ಮೊದಲಿನಿಂದಲೇ ಸಂಗೀತದಿಬಹು। ಆಸಕ್ತಿಯು ಈ ಬಾಲಿಕೆಗೆ
ಆಕೆಯ ಆಶೆಯು ಫಲ ಪ್ರದವಾದುದು। ಸಾಧನವಾದುದು ಏಳಿಗೆಗೆ
ಗಂಗೂಬಾಯೀ ಪಂಡಿತ ತೊರವೀ ಮಾಧವ ಗುಡಿ ಮರಡೂರವರು
ಇಂತಹ ಸಂಗೀತದ ದಿಗ್ಗಜರಾ ಪರಿಸರದಲಿ ಆಕೆಯ ತವರು

ಪಂಡಿತ ದಂಡಾಪೂರವರಡಿಯಲಿ ರಾಗದ ಅಡಿಪಾಯವು ದೊರೆತು
ತ್ವರಿತ ವೇಗದಲಿ ಒಳ್ಳೆಯ ಪ್ರಗತಿಯ ಸಂಗೀತದ ಶಿಕ್ಷಣವಾಯ್ತು
ತನಗಿಂತಲು ಹಿರಿವಿದ್ಯಾರ್ಥಿಗಳನು ಮೀರಿಸಿದಳು ಅಭ್ಯಾಸದಲಿ
ಸ್ವಾಗತಗೀತೆಯ ಹಾಡುತೆ ಗೆದ್ದಳು ಪ್ರಶಸ್ತಿಗಳ ಸಂಗೀತದಲಿ
ಗದಗಿನ। ವೀರೇ।ಶ್ವರ ಪುಣ್ಯಾಶ್ರಮ। ದಲಿ ನಡೆ।ದಿಹ ಸಭೆ। ಯೊಂದರಲಿ
ಛಲಬೇಕೆನ್ನುವ ಶರಣರ ವಚನವ ಹಾಡಿದಳದನತಿ ಚಂದದಲಿ
ವಚನವ ಕೇಳಿ ಪ್ರಸನ್ನತೆ ತಾಳ್ದರು ಪುಟ್ಟರಾಜರತಿ ಹರುಷದಲಿ
ತೂರಿದ ಹೂವಿನ ಮಾಲೆಯು ಸಂದಿತು ನಂದಾ ಬಾಲೆಯ ಕೊರಳಿನಲಿ

ಶಾಲೆ ಶಾಲೆಗಳಲೂ ಸಹ ಈಕೆಯ ಸಂಗೀತದ ಪ್ರತಿಭೆಯು ಬೆಳೆದು
ಆಯಾ ಶಾಲೆಗಳಲ್ಲಿಯು ಪಡೆದಳು । ಪ್ರಥಮ ಪ್ರಶಸ್ತಿಗಳಾ ಬಿರುದು
ಚೆನ್ನವೀರ ಕವಿ ಮಂತ್ರಿ ವಿರೇಂದ್ರರು ದೇವೇಗೌಡರು ಬಾಲಿಕೆಗೆ
ಇತ್ತು ಪ್ರಶಸ್ತಿಯ ಪ್ರೋತ್ಸಾಹಿಸಿದರು ಬಯಸುತಲೀ ನಂದಳ ಏಳ್ಗೆ
ಉಜ್ಜಯನೀ ಪೀಠದ ಗುರು ಈಕೆಗೆ ಗಾನ ಕೋಗಿಲೆಯ ಪದವಿಯನು
ನೀಡುತೆ ಸನ್ಮಾನಿಸಿದರು ಪ್ರತಿಭೆಯ ಪ್ರೋತ್ಸಾಹಿಸಿದರು ಬಾಲೆಯನು
ತಪೋವನದ ಸದ್ಭಕ್ತರು ಶ್ರೀ ಶಿವ ಪುತ್ರ ಅನಾಡರು ಮನ ಒಲಿದು
ಶ್ಲಾಘಿಸಿದರು ನಂದಕ್ಕನ ಅನುಪಮ ಸಂಗೀತದ ಸಾಧನೆ ನೆನೆದು

~~*~~

**೩೮.ನನ್ನ ತಾಯಿ** (ತಾಳ: ಭಜನ ಠೇಕಾ/ ಕೆಹರವಾ)
ನನ್ನ ತಾಯಿ ಅಪರೂಪ ನಿಗರ್ವಿ। ಮುಲ್ಕಿಯವರೆಗೂ ಓದಿಹಳು
ಎದುರಾಡದ ಮಾದರಿ ಸತಿ ಆಗಿಯೆ। ಪತಿಸೇವೆಯ ತಾ ಗೈದಿಹಳು
ತಂದೆ ತಾಯಿ ಮಕ್ಕಳನೆಲ್ಲರನೂ। ಲಾಲನೆ ಪಾಲನೆ ಮಾಡುತಲಿ
ಬೇಸರಿಸದೆ ಮನೆತನದಾ ಬಾಳನು । ನಿರ್ವಹಿಸಿರುವಳು ನಿಷ್ಠೆಯಲಿ
ದೊಡ್ಡಪ್ಪನು ಬರಿ ತನ್ನಯ ಬಾಳಿನ । ಗೋಜಿನಲೇ ಸಾ।ಗುತಲಿಹನು
ವಿಮಲಮ್ಮನ ಮಕ್ಕಳು ನಮ್ಮಪ್ಪಗೆ । ನೀಡಿಹರಾಗಸ। ಹಾಯವನು
ಶಾರಕ್ಕನು ಸಹ ಒಂದನೆ ವರ್ಗದಿ ಪರಪ್ಪಕೂಟಿನ ಸಾಲೆಯಲಿ
ಕಲಿತಳು ಕಿರಿಯರ ಶಾಲೆಯ ಶಿಕ್ಷಣ ಆಗಿನ ಎಡರಿನ ಸಮಯದಲಿ
ಗಂಡು ಮಕ್ಕಳಿಗೆ ಬಹು ಪ್ರಾಧಾನ್ಯವು । ಬಾಲಕಿಯರಿಗೌ ದಾಕ್ಷಿಣ್ಯ
ನಾರಿಗೆ ಸಮ್ಮಾನವು ಬರಿ ಶಾಸ್ತ್ರದಿ । ಸ್ವಾತಂತ್ರ್ಯವು ಅವ।ರಿಗೆ ಶೂನ್ಯ

**೩೯. ~~ ನಮ್ಮಯ ಮದುವೆ ~~** (ತಾಳ: ಕೆಹರವಾ)
ತೊಂಬತ್ತೊಂದನೆ ಇಸ್ವಿ ನವಂಬರ । ಮುವ್ವತ್ತಕೆ ನಮ್ಮಯ ಮದುವೆ
ಧಾರವಾಡ ನಗರೇಶ್ವರ ಗುಡಿಯಲಿ । ನಡೆದುದು ಸಂಭ್ರಮದಲಿ ಅದುವೆ
ತಂಗಿ ರೇಣುಕೆಯ ಮದುವೆಯು ಸಹ ಆ । ಮಂಟಪದಲಿ ಜರುಗಿತು ಆಗ
ಸಾಂಬ್ರಾಣಿಯ ಮನೆತನದಾ ವರನಿಗೆ । ಆಕೆಯ ಜೊತೆಗೂಡಿತು ಬೇಗ
ಕಾರಿನಲ್ಲಿ ನಗರೇಶ್ವರ ದೇವಸ್ಥಾನಕೆ ಬಂದೆವು ಸಡಗರದಿ
ಕೂಡ್ರಲು ನಮಗಿದ್ದವು ಆಸನಗಳು । ದೊರೆಗಳ ಸಿಂಹಾಸನ ತೆರದಿ
ಶುಭ ಮಹೂರ್ತದಲಿ ಆಚಾರ್ಯರು ಮಂತ್ರೋಚ್ಚಾರದ ಜೊತೆ ಅಕ್ಷತೆಯಾ
ವಧುವರರಿಗೆ ಆರೋಪಣ ಗೈದರು ಬಯಸುತೆ ಸುಖಮಯ ಬಾಳುವೆಯಾ
ಸತಿ ಪತಿಯರು ನಾವ್ ಒಬ್ಬರಿಗೊಬ್ಬರು ಮಾಲಾರ್ಪಣೆ ಗೈದೆವು ಸೊಗದಿ

ಮೊಳಗಿದುವಾ ಶುಭ ಸಮಯದಿ ಮಂಗಳ ವಾದ್ಯಗಳೆಲ್ಲವು ಸಂತಸದಿ
ವಧುವರರಿಗೆ ಒಳ್ಳೆಯದನೆ ಮಾಡಲಿ ದೇವನು ಎನ್ನುತೆ ಸಕಲ ಜನ
ಆಶೀರ್ವದಿಸಿದರೆಮ್ಮನು ಹರುಷದಿ, ನಾವೂ ಸಲ್ಲಿಸಿದೆವು ನಮನ

**೪೦. ~~ಲಘು ಸಂಗೀತ~~**

ಲಘು ಸಂಗೀತದಲಿ

ಬಹಳೇ। ದಾಸರ ಪದಗಳ। ಹಾಡಿದೆ ನಾನು।

ಲಘು ಸಂಗೀತದಲಿ

ಕೃಷ್ಣಾ ಎನಬಾರದೆ ಎಂಬುದನು

ಎನಗೂ। ಆಣೇ ರಂಗಾ। ಎಂಬುವದನ್ನೂ । ಲಘು ಸಂಗೀತದಲಿ ...

ತಾರಮ್ಮಯ್ಯಾ ಮತ್ತು । ಬುದ್ಧೀ ಮಾತೂ ಪದ

ಗುರು ಮೂಜುಂದಾರರ ಬಳಿ ಕಲಿತೆ । ಲಘು ಸಂಗೀತದಲಿ

ಕರ್ನಾಟಕೀ ಶೈಲಿ। ಗುರು ಕಲಿ ಸಿದುದುಂಟು

ಅಳುವೋದೇ ತಕೊ ರಂಗಾ ಎಂಬೂದನೂ । ಲಘು ಸಂಗೀತದಲಿ

ಇವುಗಳಲ್ಲದೆಯೇ ಅ । ಭಂಗ ಮಾರಾಠೀಲಿ

ಹಿಂದೀ ಗೀ।ತಗಳನು ಸಭೆಗಳಲೀ । ಲಘು ಸಂಗೀತದಲಿ

ಭಕ್ತಿಗೀ।ತೆಗಳಂತೆ । ಭಾವ ಗೀತೆಗಳ್ನನು

ಕವಿಗಳೆಮ್ಮವರೆಲ್ಲಾ । ರಚಿಸೀಹರು

ಚನವೀರ ಕಣವೀ ಕುವ್ವೆಂಪೂ ಐಠಸಂಗ

ದರಾ ಬೇಂದ್ರೇ ಕರ್ಕೀಯವರು

ತುಂಬಾ ಛಂದೋ ಬದ್ಧ ಐಠಸಂಗರ ಹಾಡು

ನಮ್ಮ ನೆರೆ, ಹೊರೆಯಲ್ಲಿ ಇರುವವರು

ಧರೆ ಗುಡೀಸಲು ಬೀಳಿ  ಮಂಜೀನ ಸೀರೇಯ

ಎಂಬೂವ ಹಾಡನ್ನು ಬರೆದೀಹರು

ಮಹಿಷ ವಾ।ಡೀಯವರ ಈಚೆಗಾನೂ ಎಂಬ

ಭಾವ ಗೀ।ತೆಯು ಮ್ಷನ  ಮಿಡಿದಿಹುದು

ದ. ರಾ ಬೇಂ।ದ್ರೇಯರ। ನಿನ್ನ  ಹ।ರಣವೆಂಬ

ಗೀತೇಯೂ ಬಹು ಹೆಸರಾಗೀಹುದು

ಕೃಷ್ಣಶರ್ಮರ ಪದ್ಯ ಹಾಲು ಹಳ್ಳವು ಮತ್ತೆ

ಕುವೆಂಪೂರವರಾ ಬೆಳದಿಂಗಳು

ಗೋಕಾಕರಾ ಮನೆ ದೀಪ ಎಂಬುವ ಹಾಡು

ಹುಯಿಲ್ಗೋಳರ ಕನ್ನಡ ನಾಡು

ಇಂತೆಲ್ಲ ಹೆಸರಾದ ಕವಿಗಳ ಹಾಡೆಲ್ಲ

ನಾಡು ಹೊರನಾಡುಗಳ ಸಭೆಗಳಲಿ

ಜನ ಮೆಚ್ಚೂವಂತೇಯೆ

ಹಾಡೀದೆ ಮನತುಂಬಿ ನೂರಾರು ಸಲ ಅತಿ ಹೆಮ್ಮೇಯಲಿ

**೪೧. ~~ನಂದಾ ಹಾಡಲು ~~** (ತಾಳ: ಕೆಹರವಾ)

ನಂದಾ ಹಾಡಲು ಮಹದಾನಂದಾ
ಅನುಭವ ಸು, ಸ್ವರದಲಿ ಮಿಂದಾ
ಸಂಗೀತದ ವರ ದೊರೆರೆತಿದೆ ಈಕೆಗೆ
ಗಾನದೇವಿ ಸರಸತಿಯಿಂದಾ

ಸ್ವರಗಳು ಈಕೆಯ ಬೆರಳ ತುದಿಯಲಿವೆ
ಅಗಣಿತ ರಾಗ ಹೃದಯದಲ್ಲಿ
ಸ್ವರ ಹೊರ ಹೊಮ್ಮಲು ಸಮ್ಮೋಹನದೊಲು
ಮೈಮರೆವೆವು ಬಹು ಮುದದಲ್ಲಿ

ರಾಜಶೇಖರರು ಬಸವರಾಜಗುರು
ಶ್ರೀ ಕನಕಾ ಪೂರರು ಸಹಿತ
ಸಂಗೀತದ ವರದಾನವ ಗೈದರು
ಏಳ್ಗೆಯನ್ನು ಹೊಂದಲು ಸತತ

ದೇಶದಿ ಎಲ್ಲೆಡೆ ಸಂಗೀತದ ಸಭೆ
ನಡೆಸುವುದಾಗಿರುತಿರೆ ಧ್ಯೇಯ
ಈಕೆಗೆ ಸಂದಿದೆ ನಾಡಿನ ಕೀರ್ತಿಯ
ನಾಲ್ದಿಶೆ ಮೆರೆಸಿರುವಾ ಶ್ರೇಯ

ವಿದ್ಯಾರ್ಥಿಗಳಿಗೆ ರಾಗದ ಶಿಕ್ಷಣ
ಇತ್ತಗರಿಮೆ ಸಹ ಈಕೆಯದು
ಕರ್ನಾಟಕದ ಮಹಾವಿದ್ಯಾಲಯ
ಕಾಯಕದಾ ಕ್ಷೇತ್ರವು ಇಹುದು

ರಾಜ್ಯರಾಷ್ಟ್ರ ಮಟ್ಟದ ಸಂಗೀತದ
ಸಮ್ಮೇಲನಗಳಲೂ ಹೋಗಿ
ವಿದ್ವತ್ಪೂರ್ಣ ಪ್ರಬಂಧಗಳನು ಸಹ
ಮಂಡಿಸಿದಂತಹ ವಿದ್ವಾಂಗಿ

ಸಂಗೀತ ನೃತ್ಯ ಅಕಾಡೆಮಿಯಲೂ
ಸದಸ್ಯಳಾಗಿರುತಲಿ ದುಡಿದು
ಕಾರ್ಯದಿ ಸಿದ್ಧಿಯ ಪಡೆದಿಹ ಖ್ಯಾತಿಯು
ಈ ನಂದಾ ಪಾಟೀಲಳದು

**೪೨. ~~ಸ್ವರಯಾತ್ರೆ ~~** (ತಾಳ: ಕೆಹರವಾ)

ಸ್ವರಯಾತ್ರೆಯು ಸಂಗೀತಕೆ ಪ್ರೇರಕ
ನಂದಾವಿದುಷಿಯ ಜೀವನ ಸಾರ್ಥಕ
"ಸಂಗೀತದ ರೂಪ"ಗಳ ಪ್ರಬಂಧವ
"ಹಿಂದುಸ್ತಾನಿ ಪರಂಪರೆ" ಲೇಖನ
"ಅಕ್ಕಮಹಾದೇವಿಯ ವಚನಗಳಲಿ
"ಗೇಯ ಗುಣ"ದ ಬಗೆ ಬರೆದಿಹಳು

ವಿದ್ಯಾವರ್ಧಕ ಸಂಘದಲಲ್ಲದೆ
ಅಕ್ಕನಬಳಗದ ತೆರ ಸಂಸ್ಥೆಗಳಲು
ಸಕ್ರಿಯ ಪಾತ್ರವ ವಹಿಸುತ ದುಡಿದಳು
ಸಮಾಜ ಸೇವೆಯ ಸಲಿಸಿಹಳು

ಕನ್ನಡ ಸಂಸ್ಕೃತಿ ಇಲಾಖೆಯಲ್ಲಿಯು
ವಿದ್ಯಾಲಯ ಸಾಂಸ್ಕೃತಿಕ ಸಭೆಯಲೂ
ನಿರ್ಣಾಯಕ ಅತಿಥಿಯ ಸ್ಥಾನದಿ ಸಹ
ಭಾಗ ವಹಿಸಿ ಹೆಸರಾದ'ವಳು

ಸಂಗೀತದ ಸೇವೆಯ ಅನುಲಕ್ಷಿಸಿ
ಸರಕಾರವು ಸಂಸ್ಥೆಗಳೂ ಈಕೆಗೆ
ಸನ್ಮಾನವ ಗೈಯುವುದಲ್ಲದೆ ಬಹು
ಪ್ರಶಸ್ತಿಗಳ ಕರೆದಿತ್ತಿಹವು

ಉಜ್ಜಯನೀ ಪೀಠದ ಸದ್ಗುರುಗಳು
"ಗಾನಕೋಗಿಲೆ"ಯ ಬಿರುದನು ಸಲ್ಲಿಸಿ
ಸನ್ಮಾನಿಸಿದುದು ಹೆಮ್ಮೆಯ ಸಂಗತಿ
ಕಲಾವಿದೆಗೆ ಬಹು ಸಂತೃಪ್ತಿ

ವರ ಚಿನ್ಮಯ ಸಿರಿ ಪ್ರತಿಷ್ಠಾನದಾ
"ಕಲಾಜ್ಯೋತಿ"ಯಾ ಪ್ರಶಸ್ತಿದೊರಕಿದೆ
"ಸಂಸ್ಕೃತಿ ಸೌಗಂಧ"ದ ಪ್ರಶಸ್ತಿಯೂ
ಬೈಲಹೊಂಗಲದಿ ಪ್ರದಾನವಾಗಿದೆ

ಮಹಾಲಿಂಗಪೂರದ ಹಳಕಟ್ಟೀ
ಪ್ರತಿಷ್ಠಾನದಾ "ಹಳಕಟ್ಟೀಶ್ರೀ"
ಪ್ರಶಸ್ತಿದೊರತುದು ಅಪೂರ್ವವಾದುದು
ಈ ಪರಿ ಜೀವನ ಸಾರ್ಥಕವಾದುದು

~~~~~~~~~~~~೦~~~~~~~~~~~
~~~~~~~~~~~~

## ಡಾ ವ್ಹಿ. ಸಿ. ಐರಸಂಗ

ಇಂಗ್ಲಂಡಿನ ನಿಸರ್ಗಕವಿ ವರ್ಡ್ಸ್‌ವರ್ಥನಂತೆಧಾರವಾಡದ ವ್ಹಿ. ಸಿ. ಐರಸಂಗ (ಜ. ೧೯೫೦)ರುಜನಪ್ರೀಯವಾದ ಕವಿಗಳಾಗಿದ್ದಾರೆ. ಬಿಎಸ್ಸ್‌ಸಿ ಅಭ್ಯಾಸಮಾಡಿ ದಶಕಗಳವರೆಗೆ ರೈಲ್ವೆಇಲಾಖೆಯಲ್ಲಿಗುಮಾಸ್ತರಾಗಿ, ಸದಾ ಸೈಕಲ್ ಮೇಲೆ ಒಬ್ಬಜನಪದ ಶಿಕ್ಷಕನಂತೆ ಎದ್ದುಕಾಣುವಐರಸಂಗರು ಸರಳ, ಸಜ್ಜನಿಕೆಯ ಮಾನವತಾವಾದಿಗಳು. ಅವರುಜೀವನದಎಲ್ಲ ಅನುಭವಗಳ ಬಗೆಗೆ ಸುಮಾರು ೫೦ಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿ, ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿಇತ್ತೀಚಿಗೆಕರ್ನಾಟಕ ವಿಶ್ವವಿದ್ಯಾಲಯದಗೌರವಡಾಕ್ಟರೇಟ್ ಪಡೆದಿದ್ದಾರೆ. ಈ ಆಕಾಶವಾಣಿ ಕವಿಗಳ (ಯಿ–ಚಿಟಿರ) ಕಾವ್ಯದಲ್ಲಿ ಭಾವಗೀತಾತ್ಮಕತೆ, ತತ್ವದಾರ್ಶನಿಕತೆ, ಸರಸ ಸರಳತೆ ಮುಖ್ಯ ಆಯಾಮಗಳಾಗಿದ್ದು, "ಐರಸಂಗಅವರ ಸಮಗ್ರಕಾವ್ಯ" ೨೦೧೫ರಲ್ಲಿ ಪ್ರಕಟವಾಗಿದೆ.

ಅಂದರಾಗದಿ ನಂದ, ಹಾಡೊಂದ, ಹಾಡುತಿರೆ

ಎನೊಂದು ಸಂತಸ ರಸಿಕವೃಂದಕೆ

ತೇಲಾಡಿದೊಲು ಮನವು, ತಿಳಿನೀರ ತಂಗೊಳದಿ

ಪಾರವಿಲ್ಲವುಜನರಆನಂದಕೆ

ಎನ್ನುವಐರಸಂಗರುತಮ್ಮ ನೆರೆಹೊರೆಯಗಾಯಕಿಯಕುರಿತು ಬರೆದ "ಡಾ ನಂದಾ ಪಾಟೀಲ ಕಾವ್ಯಚರಿತೆ"ಯುಕನ್ನಡ ಸಾಹಿತ್ಯ–ಸಂಗೀತಕ್ಷೇತ್ರಕ್ಕೆ ವಿಶೇಷವಾದಕೊಡುಗೆಯಾಗಿದೆ.